ನರಗುಂದ ನಗರಕ್ಕೆ ಕ್ರೀಡಾಂಗಣ

1151(803) ಶ್ರೀ ಯಾವಗಲ್ ಬಿ.ಆರ್. (ನರಗುಂದ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರಗುಂದ ನಗರಕ್ಕೆ ಕ್ರೀಡಾ ರಂಗದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಯಾವಾಗ ಈ ಕ್ರೀಡಾಂಗಣ ಅಭಿವೃದ್ಧಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು)

ಅ) ಹೌದು

ಆ) ಕ್ರೀಡಾಂಗಣ ನಿರ್ಮಾಣಕ್ಕೆ ಸೂಕ್ತ ನಿವೇಶನ ಗುರುತಿಸುವ ಪ್ರಕ್ರಿಯೆ ನಡೆಯುತ್ತಿದೆ. ನಿವೇಶನ ದೊರೆತ ನಂತರ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಪರಿಶೀಲಿಸಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಡಿ.ಬಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಎರಡು ವಿಷಯಗಳನ್ನು ಪ್ರಸ್ತಾಪ ಮಾಡಲಾಗುವುದೆಂದು ನಾವು ನಿಮಗೆ ತಿಳಿಸಿದ್ದೇವೆ.

ಅಧ್ಯಕ್ಷರು : ಅದಕ್ಕೆ ಮುಂಚೆಯೇ ತಮ್ಮ ನಾಯಕರು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ.

3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ : ವಿದ್ಯುತ್ ದರ ಹೆಚ್ಚಳ ಮತ್ತು ವಿತರಣೆ ಬಗ್ಗೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ವಿದ್ಯುತ್ ದರ ಮತ್ತು ವಿತರಣೆ ಬಗ್ಗೆ ಪ್ರಸ್ತಾಪಿಸುವುದಕ್ಕೆ ಸಂಬಂಧಪಟ್ಟಂತೆ ನಾವೂ ಕೂಡ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ವಿರೋಧಪಕ್ಷದ ನಾಯಕರಿಗೆ ಮೊದಲು ಅವಕಾಶ ಕೊಟ್ಟು ನಂತರ ನಮಗೆ ಅವಕಾಶ ಮಾಡಿಕೊಡಿ. ನಮ್ಮದೇನೂ ತಕರಾರಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಅವರೇನೂ ತಕರಾರು ಮಾಡುವುದಿಲ್ಲ. ಆದರೆ ನಮ್ಮ ತಕರಾರು ಇದೆ.

12.20 ಪಿ.ಎಂ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ನಾವು ಒಂದು ವಿಚಾರವನ್ನು ಹೇಳಿದ್ದೇವು. ಸರ್ಕಾರದ ಉತ್ತರ ಅಲ್ಲದೆ ಹೋದರೂ ಕೂಡ ಕೆಲವು ವಿಷಯದಲ್ಲಿ ತುಂಬಾ ಎಮರ್ಜೆನ್ಸಿಯಾದ ರೆಫರ್ ಮಾಡುವುದಕ್ಕೆ ಅವಕಾಶ ಸಿಗಲಿಲ್ಲ ಎಂದಾಗ ಸಮಸ್ಯೆಯಾಗಿದೆ ಎಂದಾಗ ನಾವು ನಿಮ್ಮ ಚೇಂಬರ್‌ನಲ್ಲಿ ಕೇಳಿಕೊಂಡಿದ್ದೇವು. ಏಕೆಂದರೆ ಮೈಸೂರು ನಗರದಲ್ಲಿ ಇಷ್ಟು ಬಂದ್ ಆಗುತ್ತಿದೆ.

ಅಧ್ಯಕ್ಷರು : ಈಗ ನಿಲುವಳಿ ಸೂಚನೆ ಇದೆಯಲ್ಲಿ. ಆದಾದಮೇಲೆ ಆ ವಿಚಾರವನ್ನು ಎತ್ತಿ.

ಶ್ರೀ ಎ. ರಾಮದಾಸ್ : ಒಂದು ಮಾತು ರೆಫರ್ ಮಾಡುತ್ತೇವೆ.

ಅಧ್ಯಕ್ಷರು : ನಿಲುವಳಿ ಸೂಚನೆಗೆ ಮೊದಲು ಚಾನ್ಸ್ ಕೊಡಬೇಕು. ಅವರು ನಿಲುವಳಿ ಸೂಚನೆಯಲ್ಲಿ ಏನು ವಿಚಾರ ಬರುತ್ತದೆ ಅದಕ್ಕೆ ಒಪ್ಪಿಗೆ ಕೊಡುತ್ತೇವೋ ಇಲ್ಲವೋ ಇನ್ನೂ ಗೊತ್ತಿಲ್ಲ. It depends upon the importance of the subject matter. ಅದು ಆದಾದಮೇಲೆ ಸಮಯ ಸಿಕ್ಕರೆ ತಾವು ತಮ್ಮ ವಿಚಾರವನ್ನು ಎತ್ತಿ.

ಶ್ರೀ ಎ. ರಾಮದಾಸ್ :- ಮಾನ್ಯ ಅಧ್ಯಕ್ಷರೆ, ರೈಫರೆನ್ಸ್‌ಗೋಸ್ಕರ ನಾನು ಹೇಳುತ್ತಿರುವುದು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಮಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ ಬೆಂಕಿ ಬಿದ್ದು ಸುಟ್ಟು ಹೋಗಿರುವ ವಿಚಾರವಾಗಿ ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರು : ಅದಕ್ಕೋಸ್ಕರ ನಾನು ಹೇಳಿದ್ದು. ಈಗ ನಿಲುವಳಿ ಸೂಚನೆಗೆ ಮೊದಲ ಆದ್ಯತೆ ಇದೆ. ಮೊದಲು ಅದನ್ನು ತೆಗೆದುಕೊಳ್ಳುತ್ತೇನೆ. ಆದಾದನಂತರ ತಮ್ಮ ವಿಚಾರವನ್ನು ಎತ್ತಿ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಒಂದು ಕಾಲಂಗೆ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೇನೆ. ನಮಗೆ ಅವಕಾಶ ಮಾಡಿಕೊಡುತ್ತಿಲ್ಲ. ಅದಕ್ಕೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಕೇಳಿ, ಇಲ್ಲೆ ಎರಡು ಪ್ರಶ್ನೆ ಇದೆ. ಕಾಲಿಂಗ್ ಅಟೆನ್‌ಷನ್‌ಗೆ ಮಾನ್ಯ ಮಂತ್ರಿಗಳೂ ಉತ್ತರ ಕಳುಹಿಸಿಕೊಟ್ಟರೆ ಅದರ ಮಾರನೆ ದಿವಸ ವಿಷಯವನ್ನು ಹಾಕುತ್ತೇವೆ. ಆದರೆ ಉತ್ತರ ಬರದೇ ಇದ್ದರೆ ಏನು ಮಾಡಬೇಕು?

ಶ್ರೀ ಎನ್. ಚಲುವರಾಯಸ್ವಾಮಿ : ಅದಕ್ಕೆ ನಾನು ತಮ್ಮ ಹತ್ತಿರ ಬಂದು ರಿಕ್ವೆಸ್ಟ್ ಮಾಡಿಕೊಂಡಿದ್ದೆ.

ಅಧ್ಯಕ್ಷರು : ಅವರು ಉತ್ತರ ಕೊಡುತ್ತಾರೆ. ಉತ್ತರ ಕೊಡುವುದಿಲ್ಲವೆಂದು ಹೇಳುವುದಿಲ್ಲ, ಕೊಟ್ಟೇ ಕೊಡುತ್ತಾರೆ.

ಶ್ರೀ ಎನ್. ಚಲುವರಾಯಸ್ವಾಮಿ : ನಾನು ಚಾಲೆಂಜ್ ಅಟೆನ್‌ಷನ್ ನೋಟೀಸ್ ಕೊಟ್ಟು ಒಂದು ವಾರವಾಗಿದೆ.

ಶ್ರೀ ಡಿ.ಬಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಹಲವಾರು ಸಂದರ್ಭಗಳಲ್ಲಿ ವಿಶೇಷವಾಗಿ ಹಿಂದಿನಿಂದ ನಾವು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇವೆ. ಅದೇನೆಂದರೆ ಅವರವರು ಕ್ಷೇತ್ರದಲ್ಲಿ ಇರತಕ್ಕಂಥ ಹಲವಾರು ಸಮಸ್ಯೆಗಳನ್ನು ಪ್ರಸ್ತಾಪ ಮಾಡಿದಾಗ, ಅದಕ್ಕೆ ಉತ್ತರಗಳು ತಯಾರಿದ್ದರೆ, ಆ ಕಡೆಯಿಂದ ಮಂತ್ರಿಗಳು ಉತ್ತರ ಕೊಡಬೇಕು. ಉತ್ತರ ತಯಾರಿಲ್ಲದಿದ್ದರೆ ಅದಕ್ಕೆ ಉತ್ತರಗಳನ್ನು ಒದಗಿಸಲಾಗುತ್ತದೆ. ಏಮದರೆ, ಕನಿಷ್ಟ ಈ ಸದನದಲ್ಲಿ ಸದಸ್ಯರಗಳು ಅವರವರ ಕ್ಷೇತ್ರಗಳ ಪ್ರಮುಖ ವಿಷಯಗಳನ್ನು ಪ್ರಸ್ತಾಪ ಮಾಡಿದ ಹಾಗೆ ಆಗುತ್ತದೆ ಎನ್ನುವ ಒಂದು ಸಂಗತಿ. ನಿಲುವಳಿ ಸೂಚನೆ ದಿನನಿತ್ಯ ಕೊಡುವಂತಾಗಿದ್ದು, ಒಂದು ಕ್ರಮವಾಗಿ ಮಾಡುತ್ತಿದ್ದೇವೆ. ಅದಕ್ಕೆ ವಿಶೇಷವಾಗಿ ಅತ್ಯಂತ ಒತ್ತನ್ನು ಕೊಟ್ಟು ಇಲ್ಲೆ ಸಿಗುವಂತಹ ಸಂದರ್ಭದ

ಸಮಯಕ್ಕೆ ಅನುಸಾರವಾಗಿ ನಾವು ಪ್ರಸ್ತಾಪ ಮಾಡುತ್ತೇವೆ. ಆದರೆ ಆ ಸಂದರ್ಭದಲ್ಲಿ ಶೂನ್ಯವೇಳೆ ಪ್ರಸ್ತಾಪದ ವಿಚಾರ ಹೋಗಿಬಿಟ್ಟು ಲ್ಯಾಪ್ಸ್ ಆಗುತ್ತದೆ. ಅದಕ್ಕೆ ಅವಕಾಶ ಇಲ್ಲದ ಹಾಗೆ ಆಗುತ್ತದೆ. ಅದಕ್ಕೆ ನಾನು ನಿಮ್ಮಲ್ಲಿ ಕೇಳುವುದೇನೆಂದರೆ, ಮುಂದಿನ ದಿನಗಳಲ್ಲಿ ಎಷ್ಟು ಶೂನ್ಯ ವೇಳೆ ಪ್ರಸ್ತಾಪದ ವಿಚಾರಗಳನ್ನು ಕೊಟ್ಟಿದ್ದಾರೋ, ಅವುಗಳನ್ನು ಯಾವ ದಿವಸ ನಿಲುವಳಿ ಸೂಚನೆ ಇರುವುದಿಲ್ಲ, ಅಂತಹ ದಿವಸ ಎಲ್ಲಾ ಸದಸ್ಯರಿಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅದು ಸದನದಲ್ಲಿ ಪ್ರಸ್ತಾಪವಾದಂತಾಗಿ, ಅದಕ್ಕೆ ಇನ್ನೊಂದು ದಿವಸ ಉತ್ತರಗಳನ್ನು ಕಳುಹಿಸಿಕೊಡುವಂತಹ ವ್ಯವಸ್ಥೆ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು: ಕೇಳಿ, ಹಿಂದೆ ಒಂದು ದಿವಸ ಐದು ಶೂನ್ಯವೇಳೆ ಪ್ರಸ್ತಾಪದ ವಿಚಾರಗಳು ಏನು ಬಂದಿತ್ತು ಅದನ್ನು ತೆಗೆದುಕೊಂಡು ಡಿಸ್‌ಪೋಸ್ ಮಾಡಿದ್ದೇವೆ. ಕನಿಷ್ಟ ದಿನಕ್ಕೆ ಎರಡು ಮೂರು ಹಾಕಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಡಿ.ಬಿ. ಸದಾನಂದ ಗೌಡ: ಮಾನ್ಯ ಅಧ್ಯಕ್ಷರೆ, ಏನಾಗಿದೆ ಎಂದರೆ ಕಳೆದ ಅಧಿವೇಶನದಲ್ಲಿ ವಿಷಯವನ್ನು ಒಂದು ಅಥವಾ ಎರಡು ನಿಮಿಷದಲ್ಲಿ ಪ್ರಸ್ತಾಪ ಮಾಡಬೇಕು. ಸದಸ್ಯರುಗಳು ಸುದೀರ್ಘವಾಗಿ ಚರ್ಚೆ ಮಾಡಬಾರದು. ಹಾಗೂ ಅದಕ್ಕೆ ಉತ್ತರವನ್ನು ಕೊಟ್ಟಮೇಲೆ ಮತ್ತೆ ಚರ್ಚೆ ತೆಗೆದುಕೊಳ್ಳಬಾರದೆಂದು ಹೇಳಿ, ಇದರಿಂದ ಎಲ್ಲರಿಗೂ ಹೇಳುವುದಕ್ಕೆ ಅವಕಾಶವಾಗುತ್ತಿತ್ತು. ಇದರಿಂದ ಸದಸ್ಯರುಗಳಿಗೆ ಪೂರ್ತಿ ಪ್ರಮಾಣದಲ್ಲಿ ಅವರ ಕ್ಷೇತ್ರದ ಸಮಸ್ಯೆಗಳನ್ನು ಪ್ರಸ್ತಾಪ ಮಾಡಿದ್ದೇವೆ ಎನ್ನುವ ನೆಮ್ಮದಿ ಇರುತ್ತಿತ್ತು. ಹಾಗೆ ನೆಮ್ಮದಿಯನ್ನು ಕೊಡುವಂತಹ ಕೆಲಸವನ್ನು ತಾವು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಅದಕ್ಕೆ ಇನ್ನು ಬೇಕಾದಷ್ಟು ದಿವಸ ಸಭೆ ಇರುತ್ತದೆ ಅಲ್ಲ;

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನದು ಪ್ರಮುಖವಾದ ಪ್ರಶ್ನೆ. ನನ್ನ ತಾಲ್ಲೂಕಿನಲ್ಲಿ ಒತ್ತುವರಿ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು: ಪ್ರತಿಯೊಬ್ಬ ಸದಸ್ಯರೂ ಪ್ರಮುಖ ವಿಷಯ ಇದೆ. ಅವರವರ ಸಬ್ಜೆಕ್ಟ್ ಅವರಿಗೆ ಮುಖ್ಯವಾಗಿರುತ್ತದೆ. ನಿಮ್ಮೊಬ್ಬರದೇ ಅಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ: ಅಲ್ಲಿ 200 ಎಕರೆ ಒತ್ತುವರಿ ಮಾಡಿಕೊಂಡು ಕೆಲವರು ಬೇರೆ ಆಗಿಬಿಟ್ಟಿದ್ದಾರೆ. ಅದಕ್ಕೆ ಸರ್ಕಾರದಿಂದ ಮುಂದಿನ ಕ್ರಮ ಏನು ಎಂದು ಕೇಳಿದ್ದೇನೆ. ಸರ್ಕಾರ ಉತ್ತರ ಹೇಳದಿದ್ದಾರೂ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳಲಿ.

ಶ್ರೀ ಸಿ. ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ನಾನು...

ಅಧ್ಯಕ್ಷರು: ಮಾನ್ಯ ಚೆನ್ನಿಗಪ್ಪ ನವರೇ ನಾನು ಹೇಳಿದ್ದೇನೆ, ನಿಲುವಳಿ ಸೂಚನೆಗೆ ಇನ್ನು ಒಪ್ಪಿಗೆ ಕೊಡುತ್ತೀನೋ ಇಲ್ಲವೋ ಗೊತ್ತಿಲ್ಲ. ಇನ್ನೂ ಹದಿನೈದು ದಿವಸ ವರ್ಕಿಂಗ್ ಡೇಸ್ ಇದೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಕಾಲಿಂಗ್ ಅಟೆನ್‌ಷನ್‌ಗೆ ಇವತ್ತು ಆದೇಶ ಮಾಡಿದ್ದೀರಿ. ಆದರೆ ಇವತ್ತು ಅದು ಬರಲೇ ಇಲ್ಲ.

ಅಧ್ಯಕ್ಷರು : ಅವರಿಗೆ ಏನು ಉತ್ತರ ಹೇಳಿದ್ದೇನೋ, ನಿಮಗೂ ಕೂಡ ಅದೇ ಉತ್ತರ ಹೇಳುತ್ತಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಸದನವನ್ನು ಹೇಗೆ ನಡೆಸಬೇಕು ಎನ್ನುವುದು ತಮ್ಮ ವಿವೇಚನೆಗೆ ಬಿಟ್ಟುಬಿಡುತ್ತೇನೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಪ್ರತಿದಿವಸ ಒಂದು ನಿಲುವಳಿ ಸೂಚನೆ ತೆಗೆದುಕೊಳ್ಳುವುದು, ಅದು ಮುಗಿದಮೇಲೆ ಮತ್ತೊಂದು ತೆಗೆದುಕೊಳ್ಳುವುದು, ಇನ್ನೊಂದು ತೆಗೆದುಕೊಳ್ಳುವುದು; ಅದು ಸಂಸದೀಯ ನಡವಳಿಕೆಯಲ್ಲಿ ನನಗೆ ಗೊತ್ತಿದ್ದ ಹಾಗೆ ಸರಿ ಅನಿಸುವುದಿಲ್ಲ. ಅದನ್ನು ನಾನು ತಮಗೆ ನಿವೇಶನೆ ಮಾಡಿ ಕೊಳ್ಳುತ್ತಿದ್ದೇನೆ. ಅಲ್ಲದೆ ಎರಡನೆಯದಗಿ ನಿಲುವಳಿ ಸೂಚನೆಯನ್ನು ತರುವುದಕ್ಕೆ ಕೆಲವು ನಿಯಮಗಳು ಇದೆ. ಆದರೆ ಅದನ್ನು ಅಡ್ಮಿಷನ್ ಸ್ಟೇಜ್‌ನಲ್ಲೆ ಅವರು ಏನು ಪ್ರಸ್ತಾಪ ಮಾಡುತ್ತಾರೋ ನನಗೆ ಗೊತ್ತಿಲ್ಲ. ಆದರೆ ಒಂದಂತೂ ನನ್ನ ಕೈಯಲ್ಲೆ ಬಂದಿರುವ ನಿಲುವಳಿ ಸೂಚನೆ ಪ್ರಕಾರ ವಿದ್ಯುತ್ ಮಂಡಲಿಯ ಬಗ್ಗೆ ಸಮಗ್ರ ಚರ್ಚೆಯಾಗುವಂತಹ ವಿಚಾರ ಇದೆ. ನನಗೆ ಗೊತ್ತಿರುವ ಹಾಗೆ / ಪ್ರೊಸೀಜರ್‌ನಲ್ಲೆ ಒಂದು ಮಾತು ಹೇಳುತ್ತಾರೆ.

" Page 447- Motion for Adjournment Motion- matters of urgent public importance :

Generally speaking, the subject matter of an adjournment Motion must have a direct or indirect relation to the conduct or default on the part of the Government. "On the part of the Government "- I am making a stress on that pooint. Secondlu , " an Adjournment Motion is not admissible unless there was failure on the part of the Government to perform the duties enjoyed by the constitution and the law.

449 : " Matters relationg to day to day administration of an autonomous organisaiton, corporation cannot be raised by way of an adjournent motion." KPTCL is in a way an autonomous organisaton. the Government has nothing to do with the duties adn activities of the KPTCL. Here, there is no failure on the part of the Government to perform the duties enjoyed by the Constitution or by law. Therefore it is not a subject matter of an adjournment motion. Then there must be direct or iondirect relation to the conduct or default on the part of the Government. Therefore, there is neither the failure of the Government nor is there Constitutional obligation on the part of the Government.

That is the Constitutional obligation, " the Constittutional obligation" and the duty of this House. ಜೊತೆಗೆ ರಾಜ್ಯಪಾಲರ ಭಾಷಣದ ವಂದಾನ ನಿರ್ಣಯದ ಮೇಲೆ anything under the Sund could be discussed

ಈ ಎಲ್ಲಾ ವಿಚಾರಗಳನ್ನು ಆ ಚರ್ಚೆಯಲ್ಲಿ ಮಾತನಾಡಬಹುದು. ಆದುದರಿಂದ ಸದನ ಕ್ರಮವಾಗಿ ಕಾನೂನು ಬದ್ಧವಾಗಿ ನಾವೇ ಹಾಕಿಕೊಂಡಿರತಕ್ಕಂಥ ನಡವಳಿಕೆ ರೀತಿಯಲ್ಲಿ ನಡೆಯಬೇಕು ಎಂದರೆ ಇದು ಸರಿ ಎಂದು ಅನ್ನಿಸುವುದಿಲ್ಲ. ತಾವು ದಯಮಾಡಿ ರಾಜ್ಯಪಾಲರ ಭಾಷಣದ ವಂದಾನ ನಿರ್ಣಯಕ್ಕೆ ಪ್ರಸ್ತಾಪವನ್ನು ಮೂವ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದು ಈ ಸದನಕ್ಕೆ ಗೌರವ ತರತಕ್ಕಂಥಾದ್ದು ಅಲ್ಲ. ಆದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಪ್ರಸ್ತಾಪ ಮಾಡಲಿಲ್ಲ. ಅದನ್ನು ಯಾವರೀತಿ ಪ್ರಸ್ತಾಪ ಮಾಡಬೇಕು? ಎಲ್ಲಿ ಫೈಲ್ಯೂರ್ ಆಗಿದೆ? ನಾನು ಪ್ರಸ್ತಾಪ ಮಾಡದಿರೋರತು.

ಅಧ್ಯಕ್ಷರು : ನೀವು ಆಗಲೇ ಮೂವ್ ಮಾಡಿದ್ದೀರಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅದನ್ನು ಮೂವ್ ಮಾಡಿರಬಹುದು. ಆದರೆ ಅದರ ಬಗ್ಗೆ ಪ್ರಸ್ತಾಪ ಮಾಡಿಲ್ಲ.

ಅಧ್ಯಕ್ಷರು : ಈಗ ಕಾನೂನು ಮತ್ತು ಸಂಸದೀಯ ಸಚಿವರು ಹೇಳುವುದು ಸರಿಯಿದೆ. ಈಗ ನನ್ನ ಒಪೀನಿಯನ್ ಕೂಡ ಅದೇ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಾರ್ವಜನಿಕರಿಗೆ ಸಂಬಂಧಪಟ್ಟ ಹಾಗೆ ಮುಖ್ಯವಾದ ವಿಷಯಗಳನ್ನು ಸದನದಲ್ಲಿ ಎತ್ತುವುದಕ್ಕೆ ನಮಗೆ ಹಕ್ಕಿದೆ.

ಅಧ್ಯಕ್ಷರು : ಅದನ್ನು ನಾನು ಒಪ್ಪಿಕೊಂಡೆ. ನಾನು ಹೇಳುವವರೆಗೆ ನಿಲ್ಲಿ; ನಂತರ ನೀವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವು ಎಷ್ಟು ನಿಲುವಳಿ ಸೂಚನೆಯನ್ನು ನಿಮಗೆ ಕಳುಹಿಸಿದ್ದೇವೆ? ಹೇಳಿ. ರೈತರ ಸಮಸ್ಯೆ ಬಗ್ಗೆ ಒಂದೇ ಕಳುಹಿಸಿರುವುದು. ಒಟ್ಟಾರೆ ನಿಲುವಳಿ ಸೂಚನೆ ಬೇಡವೇ ಬೇಡ ಎಂದರೆ ಹೇಗೆ? ಅವು ಬಹಳ ಮಹತ್ವದ ವಿಷಯಗಳು ಇರುತ್ತವೆ. ಯಾವುದು ಬರ್ನಿಂಗ್ ಟಾಪಿಕ್ಸ್ ಇದೆ ಅದರ ಬಗ್ಗೆ ಪ್ರಸ್ತಾಪ ಮಾಡಿ ಚರ್ಚೆ ಮಾಡಬೇಕಾಗುತ್ತದೆ. ಇವತ್ತು ನಾವು ರಾಜ್ಯಪಾಲರ ಭಾಷಣದ ವಂದಾನ ನಿರ್ಣಯದ ಮೇಲೆ ಮಾತನಾಡುವುದು ಇದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಮಾನ್ಯ ಅಧ್ಯಕ್ಷರಿಗೆ ಅಪೀಲ್ ಮಾಡಿಕೊಂಡಿದ್ದೇನೆ. ಕಳೆದ ಶುಕ್ರವಾರದವರೆಗೆ ಒಂದು ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಿ ಚರ್ಚೆಯಾಗಿದೆ. ಈ ಸೋಮವಾರ ಮತ್ತೊಂದು ಪ್ರಸ್ತಾಪ ಮಾಡಿ ನಿಲುವಳಿ ಸೂಚನೆಯನ್ನು ಚರ್ಚೆ ಮಾಡಬೇಕೆಂದು ಇದೆ. ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಆದರೆ ಎಲ್ಲವೂ ನಿಯಮ ಬಾಹಿರವಾಗಬಾರದು. ಇಲ್ಲಿ ಇದುವರೆಗೆ ಒಂದು ನಿಲುವಳಿ ಸೂಚನೆ ತೆಗೆದುಕೊಂಡಾಗಿಬಿ. ಬೇರೆ ಏನಾದರು ಇದೆಯೇ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಇಲ್ಲೆ ತಂದಾಗ ರೈತರ ಸಮಸ್ಯೆ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಮುಖ್ಯವಾಗಿ ಇವತ್ತು ಜನರಿಗೆ, ರೈತರಿಗೆ ಹಾಗೂ ಈ ಸದನದ ಮುಂತಾದ ಕರ್ನಾಟಕದ ಕಲ್ಯಾಣವಾಗಬೇಕು. ಕೇವಲ ತಾಂತ್ರಿಕ ಕಾರಣಗಳನ್ನು ಹೇಳಿಕೊಂಡು ನಿಲುವಳಿ ಸೂಚನೆ ಬೇಕಾಗಿಲ್ಲವೆಂದರೆ, ಯಾವುದು ವಿಷಯ ಮಹತ್ವ ಇರುತ್ತದೆ ಅದನ್ನು ಪ್ರಸ್ತಾಪ ಮಾಡಬೇಕಾಗಿದೆ. ವಿಷಯ ಇಯತ್ತದೆ ಅದನ್ನು ನಾವು ಪ್ರಸ್ತಾಪ ಮಾಡಬಹುದು. ಅದು ನಿಲುವಳಿ ಸೂಚನೆ ಮುಖಾಂತರ ಬರಬೇಕಾಗುತ್ತದೆ ಅಥವಾ ಬೇರೆ ರೀತಿಯಿಂದ ಅದನ್ನು ತರಬೇಕಾಗುತ್ತದೆ. ಅದು ತಮ್ಮ ಡಿಸ್ಕ್ರಿಷನರಿ ಪವರ್‌ಗೆ ಬಿಟ್ಟಿದ್ದು. ಅದನ್ನು ತಾವು ಯಾವರೀತಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರೋ ಅದು ನಿಮಗೆ ಬಿಟ್ಟಿದ್ದು. ನಾವು ಮೊದಲು ಪ್ರಿಲಿಮಿನರಿ ಸಬ್‌ಮಿಷನ್ ಮಾಡುತ್ತೇವೆ. ಅದಕ್ಕೆ ಅವಕಾಶ ಇಲ್ಲ ಎಂದರೆ, ಹಾಗಾದರೆ ಸದನ ನಡೆಯುವುದು ಬೇಡ.

ಅಧ್ಯಕ್ಷರು : ನಾನು ಹೇಳುವುದು ಇಷ್ಟೆ, ತಾವು ನಿಲುವಳಿ ಸೂಚನೆ ತಂದಿದ್ದೀರಿ. ಮಾನ್ಯ ಚಂದ್ರೇಗೌಡರು ಏನು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಇದನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಅಧ್ಯಕ್ಷರೆ. ತಾವು ದಯಮಾಡಿ ಕೇಳಿ.

ಅಧ್ಯಕ್ಷರು : ಅವರು ಈಗ ನಿಲುವಳಿ ಸೂಚನೆಯನ್ನು ತಂದಿದ್ದೀರಿ, ಅದಕ್ಕೆ ಮಾನ್ಯ ಚಂದ್ರೇಗೌಡರು ಈಗ ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆಂದರೆ ಅದನ್ನು ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. Where the Government has failed, we want to highlight. ತಾವು ದಯಮಾಡಿ ಕೇಳಿ, ನಾನು ನಿಮ್ಮಲ್ಲಿ ಸಬ್‌ಮಿಷನ್ ಮಾಡುತ್ತಿದ್ದೇನೆ. ಈ ಅಧಿವೇಶನ ಪ್ರಾರಂಭವಾದ ಮೇಲೆ ನಿಲುವಳಿ ಸೂಚನೆಯನ್ನು ಕಳುಹಿಸಿರುವಂಥಾದ್ದು ಒಂದೇ, ಅದನ್ನು ತಾವು ಮಹತ್ವವಾದ ವಿಚಾರವೆಂದು ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದರಿಂದ ಮಾಡಿದ್ದೇವೆ. ಅದೇ ರೀತಿಯಲ್ಲಿ ಇದು ಸಹ ಅಷ್ಟೇ ಮಹತ್ವವಾದಂಥಹ ವಿಚಾರವಾಗಿದೆ. ಇದರಲ್ಲಿ ಸರ್ಕಾರದ ವೈಫಲ್ಯತೆ ಇದೆ, ಇದನ್ನು ಮಾನ್ಯ ಮುಖ್ಯಮಂತ್ರಿಯವರು ಹಾಗೂ ಸರ್ಕಾರ ಮನಸ್ಸು ಮಾಡಿದರೆ ಇದನ್ನು ಸರಿ ಮಾಡಬಹುದೆನ್ನುವ ದೃಷ್ಟಿಯಿಂದ ಈ ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ. ಇದಾದಮೇಲೆ ತೀರ್ಮಾನವನ್ನು ನಿಮಗೆ ಬಿಡುತ್ತೇವೆ. ಇವತ್ತು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಲ್ಲಿಸುವ ಬಗ್ಗೆ ನಮಗೂ ಕಳಕಳಿ ಇದೆ. ಇವತ್ತು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವಂಥಾದ್ದರ ಬಗ್ಗೆ ನಬಮಮ ಜವಾಬ್ದಾರಿಯೂ ಇದೆ. ಈಗ ಇಲ್ಲಿ ಪಾಠ ಹೇಳುತ್ತಿರುವವರು, ಈ ಕಡೆ ಇದ್ದಾಗ ಏನೇನು ಪಾಠ ಮಾಡಿದ್ದಾರೆಂಬುದು ನಮಗೂ ಗೊತ್ತಿದೆ. ಅವರಿಗೆ ರಾಜ್ಯಪಾಲರು ಹಾಗೂ ಅವರ ಭಾಷಣದ ವಂದಾನ ನಿರ್ಣಯದ ಬಗ್ಗೆ ಏನು ಕಳಕಳಿ ಇದೆ, ಅದು ನನಗೂ ಇದೆ. ಇವತ್ತು ಅದನ್ನು ಮಾಡೋಣ, ಈಗ ತಾವು ನಮಗೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು : ತಾವು ಈಗ ಮಾತನಾಡುವುದಕ್ಕೆ 8- 10 ಜನರು ಹೆಸರು ಕೊಟ್ಟಿದ್ದೀರಿ. ಮಾನ್ಯ ಚಂದ್ರೇಗೌಡರು ಹೇಳುವಂಥಾದ್ದರಲ್ಲಿ ಅರ್ಥವಿದೆ. ಸದನದಲ್ಲಿ ಮಾನ್ಯ ರಾಜ್ಯಪಾಲರು ಹೋದ ತಿಂಗಳು 26 ನೇ ತಾರಿಖಿನಂದು ಭಾಷಣ ಮಾಡಿದ್ದು, ಇದು 8- 10 ದಿವಸಗಳು ಮುಂದೆ ಹೋಗುತ್ತಿದೆ. ಆದುದರಿಂದ ಈಗ ಇದನ್ನು ಮೂವ್ ಮಾಡಲಿ. ಅವರು ಅರ್ಧ ಗಂಟೆ ಮಾತನಾಡಲಿ, ಆಮೇಲೆ ನಿಮ್ಮ ವಿಷಯವನ್ನು ತೆಗೆಕೊಳ್ಳೋಣ. ಅರ್ಧಗಂಟೆಯಲ್ಲಿ ಏನಾಗುತತದೆ? ಈ ಗ ಮಾನ್ಯ ವೈ.ಕೆ.ರಾಮಯ್ಯ ನವರು ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ಮೂವ್ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವು ಇವತ್ತು ಬೆಳಿಗ್ಗೆ ನಿಮ್ಮ ಚೇಂಬರ್‌ಗೆ ಬಂದಿದ್ದೆವು, ಆಗ ಮಾನ್ಯ ಚಂದ್ರೇಗೌಡರು ಇದ್ದರು. ನಾವು ಅಲ್ಲಿ ಮಾತನಾಡುವಾಗ ಏನಾಗಿತ್ತು? ಇಲ್ಲಿ ಏನೋ ಅಂಡರ್‌ಸ್ಟ್ಯಾಂಡಿಂಗ್ ಆಗಿರುತ್ತದೆ. ಇನ್ನು ಮುಂದೆ ನಿಮ್ಮ ಚೇಂಬರ್‌ಗೆ ಬರುವುದಿಲ್ಲ. ಈ ರೀತಿ ಮಾಡಿದರೆ ಇನ್ನು ಮುಂದೆ ನಮಗೆ ತಿಳಿದಹಾಗೆ ನಾವು ಪ್ರಸ್ತಾಪ ಮಾಡುತ್ತೇವೆ, ಅವರಿಗೆ ತಿಳಿದಹಾಗೆ ಅವರು ಪ್ರಸ್ತಾಪ ಮಾಡಲಿ, ನೀವು ನಮಗೆ ಬೆಳಿಗ್ಗೆ ಹೇಳಬೇಕಾಗಿತ್ತು. ಶ್ರೀ ವೈ.ಕೆ.ರಾಮಯ್ಯನವರು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ಪ್ರಸ್ತಾಪ ಮಾಡಲಿ ಎಂದು. ಅದರ ಬಗ್ಗೆ ಪ್ರಶ್ನೆ ಇಲಲ, ಅದಕ್ಕೂ ಅವಕಾಶವನ್ನು ಕೊಡೋಣ. ಅದರ ಬಗ್ಗೆ ನಮಗೂ ಜವಾಬ್ದಾರಿ ಇದೆ, ಅದರ ಬಗ್ಗೆಯೂ ಚರ್ಚೆ ಮಾಡುತ್ತೇವೆ. ಆದರೆ ಈಗ ಮೊದಲು ನಾವು ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ, ಆಮೇಲೆ ಇದು ತಮಗೆ ಬಿಟ್ಟದ್ದು.

ಅಧ್ಯಕ್ಷರು : ಹಾಗಾದರೆ ನೀವು ಯಾರಾದರೂ ಇಬ್ಬರು ಮಾತನಾಡಿ.

ಶ್ರೀ ಡಿ.ಬಿ ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ನನ್ನ ಆಬ್ಜೆಕ್ಷನ್ ಅದಲ್ಲ, ನನ್ನ ಅಬ್ಜೆಕ್ಷನ್ ಏನೆಂದರೆ KPTCL is an autonomous organisation. The Government has nothing to do with that. Therefore, it cannot be discussed under Adjournment Motion. I want a considered Ruling from the Chair.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅವರು ಇದರಲ್ಲಿ ನಿಲುವಳಿ ಸೂಚನೆ ಬರುವುದಿಲ್ಲ, ಜ್ಯುಡೀಶಿಯಲ್ ಆಗಿ ಬರುವುದಿಲ್ಲ. ಈ ಪರಿಧಿಯೊಳಗೆ ಬರುವುದಿಲ್ಲವೆಂದು ಹೇಳಲಿ.

Mr. SPEAKER : I want to verify the records. Only afterwards I can give the Ruling.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಬಿ.ಚಂದ್ರೇಗೌಡರು ಒಂದು ಅಂಶವನ್ನು ಉದ್ಧಾರ ಮಾಡಿದ್ದಾರೆ. " The matter must be of Public Importance".

452 To be in order., an Adjournment Motion must raise a matter of sufficient public importance to warrant interrrution of normal business of the House. No hard and fast rule can be laid down, as to what constiitutues the Public Importance. " I repeat, " No hard and fast rule can be laid down as to what constitutes the public

importanc". The question of public importance is decided on merits in each individual case. It is always a relative question." ಎಂದು ಹಾಕಿಕೊಂಡು ಹೋಗಿದ್ದಾರೆ. ಇದು ಇವತ್ತು ಸಾರ್ವಜನಿಕವಾಗಿ ಬಹಳ ಮುಖ್ಯವಾದಂತಹ ವಿಚಾರವೆಂದು ತಮ್ಮ ಗಮನಕ್ಕೆ ತಂದು ಇದನ್ನು ನಿಲುವಳಿ ಸೂಚನೆಯ ಮೂಲಕ ಸಬ್‌ಮಿಷನ್ ಮಾಡಬೇಕೆಂದು ಇದ್ದೇವೆ. ತಾವು ಇದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳುತ್ತಿದ್ದೇವೆ.

ಶ್ರೀ. ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಸರ್ವಜನಿಕ ಮಹತ್ವವಾದಂತಹ ವಿಷಯದ ಬಗ್ಗೆಯಾಗಲಿ, ಸದಸ್ಯರ ಇಂಪಾರ್ಟೆಂಟ್ ಬಗ್ಗೆಯಾಗಲೀ ಪ್ರಸ್ತಾಪ ಮಾಡಲಿಲ್ಲ. ನಾನು ಪ್ರಿಲಿಮಿನರಿಯಾಗಿ ಅಬ್ಜೆಕ್ಷನ್ ಮಾಡಿರುವಂಥಾದ್ದು ಏನೆಂದರೆ ಈ ಕೆ.ಪಿ.ಟಿ.ಸಿ.ಎಲ್. ಇದೆಯಲ್ಲಾ ಇದು it is an autonomous organisation.

ಶ್ರೀ ಪಿ.ಜಿ.ಆರ್. ಸಿಂಧ್ಯ ಮಾನ್ಯ ಅಧ್ಯಕ್ಷರೆ, There is no doubt that it is an autonomous body.

ನೀವು ಮಾಡಿರುವಂಥಾದ್ದು ಕಾರ್ಗತ್ತಲಿನಿಂದಾಗಿ ಲಾ ಆಂಡ್ ಪ್ರಾಬ್ಲಂ ಕ್ರಿಯೇಟ್ ಆಗುತ್ತದೆ. ಇದನ್ನು ನಾವು ನಿಮಗೆ ತಿಳಿಸಬೇಕಲ್ಲಾ, ಅದಕ್ಕೋಸ್ಕರ ನಾವು ಈ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಇರುವುದು, ನಾನು ಸಹ ಈ ವಿಚಾರವಾಗಿ ಪತ್ರವನ್ನು ಕಳುಹಿಸಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಮಾನ್ಯ ವಿರೋಧಪಕ್ಷದ ನಾಯಕರು ಕಳುಹಿಸಿರುವಂತಹ ನಿಲುವಳಿ ಸೂಚನೆಗೆ ಸೀಮಿತವಾಗಿ ಮಾಡತನಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಮ್ಮ ಕಡತವನ್ನು ನೋಡಿ, ತಮಗೆ ಗೊತ್ತಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ಈಗ ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ಮೊದಲ ಆದ್ಯತೆಯನ್ನು ಕೊಡುವಂಥಾದ್ದು ಈ ಸದನದ ಆದ್ಯ ಕರ್ತವ್ಯವಾಗುತ್ತದೆ, ಅದಕ್ಕೆ ಅವಕಾಶವನ್ನು ಕೊಡುವಂತಾದ್ದು ತಮ್ಮ ಧರ್ಮ. ಇವತ್ತಿಗೂ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ಬಗ್ಗೆ ಇನ್ನೂ ಸಭೆಯಲ್ಲಿ ಪ್ರಾರಂಭ ಮಾಡುವುದಕ್ಕೆ ಆಗಲಿಲ್ಲ. ಈ ವಂದನಾ ನಿರ್ಣಯದ ಮೆಲೆ ಡಿಸ್‌ಕಸ್ ಮಾಡುವಂಥಾದ್ದು ಸಹ ಸಾರ್ವಜನಿಕ ಮಹತ್ವವಾದಂತಹ ವಿಷಯವಾಗಿದೆ. ನಾವು ಈ ಸದನದಲ್ಲಿ ನಮ್ಮ ಮನೆಯ ವಿಚಾರವನ್ನು ಏನು ಪ್ರಸ್ತಾಪ ಮಾಡುತ್ತಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆ, ಅದಕ್ಕೆ ಒಂದೆರಡು ದಿವಸಗಳು ಹೆಚ್ಚು ಕಡಿಮೆಯಾಗಬಹುದು. ಆದುದರಿಂದ ಈಗ ರೆಸಲ್ಯೂಶನ್ ಮೂವ್ ಮಾಡಿ ಮಾತನಾಡಿದ ನಂತರ the earliest opportunity will be available to the Leader of the pposition.

ಅಧ್ಯಕ್ಷರು: ನಾನು ಅದನ್ನೇ ಹೇಳುತ್ತಿದ್ದೇನೆ, ಅವರು ಹೆಚ್ಚೆಂದರೆ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ಪ್ರಸ್ತಾಪ ಮಾಡಿ ಅರ್ಧ ಗಂಟೆಯ ಕಾಲ ಮಾತನಾಡುತ್ತಾರೆ. ಆನಂತರ ತಮ್ಮ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಎನ್. ಬಚ್ಚೇಗೌಡ: ಇನ್ನು ನಿಲುವಳಿ ಸೂಚನೆಯನ್ನು ಪ್ರಾರಂಭಮಾಡಿಲ್ಲ, ಅಷ್ಟರಲ್ಲೆ ನೀವು ರಿಜೆಕ್ಟ್ ಮಾಡಿ ಎನ್ನುವಂಥಾದ್ದು.

ಅಧ್ಯಕ್ಷರು: ಅವರು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೊ, ಬೇಡವೋ? ಎಂಬ ಬಗ್ಗೆ ಚರ್ಚೆಯಾಗುತ್ತಿದೆ. ಇದನ್ನು ಪ್ರಸ್ತಾಪ ಮಾಡುವುದು ಬೇಡವೆಂದು ಹೇಳಲಿಲ್ಲ. ಅವರು ತೆಗೆದುಕೊಳ್ಳಬಾರದೆಂದು ಹೇಳುತ್ತಿದ್ದಾರೆ.

ಶ್ರೀ ಎ.ರಾಮದಾಸ್ : ಮಾನ್ಯ ಅಧ್ಯಕ್ಷರೆ, ಇದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಯಾವುದರಲ್ಲಿ ಹೇಳಿದ್ದಾರೆ. We will show the Constitutional obligation of the Government.

ಅಧ್ಯಕ್ಷರು: ಮಾನ್ಯ ರಾಮದಾಸ್‌ರವರೆ, ಮಾನ್ಯ ಮಂತ್ರಿಯವರು ಮಾತನಾಡುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಏನೂ ಮಾತನಾಡುವುದಿಲ್ಲ. ಇಲ್ಲಿಯವರೆಗಿನ ನಡೆದುಕೊಂಡು ಬಂದಿರುವಂಥಹ ಸಂಪ್ರದಾಯವನ್ನು ನಾವು ಬ್ರೇಕ್ ಮಾಡುವಂಥಾದ್ದು ಸರಿಯಲ್ಲ. ಅವರಿಗೆ ನೋಟೀಸ್ ಕೊಡುವುದಕ್ಕೆ ಹಕ್ಕಿದೆ, ಆದರೆ ಇದರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಮಾನ್ಯ ಮಂತ್ರಿಯವರು ಹೇಳಿದರು, ಮತ್ತೆ ಇದು ಕಾರ್ಪೊರೇಷನ್ ಡೇ ಟು ಡೇ ಆಡಳಿತಕ್ಕೆ ಸಂಬಂಧಪಟ್ಟಂಥಾದ್ದನ್ನು ಪ್ರಸ್ತಾಪ ಮಾಡುವುದಕ್ಕೆ ಬಳಸಬಾರದೆಂದು ಹೇಳಿದರು. ಅದು ವಾಸ್ತವಾಂಶವೂ ಆಗಿದೆ, ಪುಸ್ತಕವನ್ನು ಬರೆಯುವವರು ಬಹಳ ಯೋಚನೆ ಮಾಡಿ ಬರೆದಿರುತ್ತಾರೆ. ಈ ಗನನ್ನ ಮನವಿ ಏನೆಂದರೆ ಫೆಬ್ರವರಿಯ ತಿಂಗಳಲ್ಲಿ 26 ರಂದು ರಾಜ್ಯಪಾಲರು ಭಾಷಣವನ್ನು ಮಾಡಿದ್ದಾರೆ. ಇದನ್ನು ಇವತ್ತಿನವರೆಗೂ ಸಭೆಯಲ್ಲಿ ಪ್ರಸ್ತಾಪ ಮಾಡಲಿಲ್ಲವೆಂದರೆ ಅದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ಅದಕ್ಕೆ ಮಾನ್ಯ ಸದಸ್ಯರುಗಳು ಅವಕಾಶವನ್ನು ಕೊಡದೇ ಈ ರೆಸಲ್ಯೂಷನ್ ಅನ್ನು ಮೂವ್ ಮಾಡುವುದಕ್ಕೆ ಅವಕಾಶ ಮಾಡಿದರೆ ಒಂದ ಕಟ್ಟು ಅದು ಸಂಪ್ರದಾಯಕ್ಕೆ ದಾರಿ ಮಾಡಿಕೊಟ್ಟ ಹಾಗೆ ಆಗುತ್ತದೆ.

ಅಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನಾವು ಈಗ ಒಂದು ಕೆಲಸ ಮಾಡೋಣ. ನಾವು, ನೀವು ಮತ್ತು ಮಾನ್ಯ ಚಂದ್ರೇಗೌಡರು ಇದರ ಬಗ್ಗೆ ಈ ರೀತಿ ಮಾಡಬಹುದೆಂಬ ಅಂದಾಜಿನಿಂದಲೇ ಇತ್ಯರ್ಥಕ್ಕೆ ಬಂದಿದ್ದೇವೆ. ಈಗ ನಾವು 8- 10 ಜನರು ಮಾತನಾಡುವುದಕ್ಕೆ ಆಗುವುದಿಲ್ಲ, ಆದುದರಿಂದ ಒಂದೊಂದು ಪಾರ್ಟಿಯಿಂದ ಒಬ್ಬೊಬ್ಬರು ಮಾತನಾಡಬಹುದೆಂದು ತೀರ್ಮಾನವಾಗಿದೆ, ಆ ರೀತಿ ಮಾಡಿದರೆ ಅರ್ಧ ಗಂಟೆಯಲ್ಲಿ ಮಾಡಬಹುದು.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಈ ರೀತಿಯ ಖಾಜಿ ನ್ಯಾಯ ಮಾಡುವಂತಹ ಪ್ರಶ್ನೆಯಲ್ಲ.

ಅಧ್ಯಕ್ಷರು: ಮಾನ್ಯ ಚಂದ್ರೇಗೌಡರೇ, ಇದು ಖಾಜಿ ನ್ಯಾಯವೆಂದಲ್ಲ, ಇದು ಕೋ-ಆಪರೇಷನ್ ಪ್ರಶ್ನೆಯಾಗಿದೆ.

SRI D.B. CHANDREGOWDA : I want a ruling from the Chair.

ಶ್ರೀ ಟಿ.ಜಿ.ಆರ್. ಸಿಂಧ್ಯ : ಮಾನ್ಯ ಚಂದ್ರೇಗೌಡರು, ವಿರೋಧಪಕ್ಷದಲ್ಲಿ ಕುಳಿತಿದ್ದಾಗ ಏನು ಮಾಡಿದ್ದಾರೆಂಬುದು ನಮಗೆ ಗೊತ್ತಿದೆ.

(ಗೊಂದಲ)

SRI. K.H. RANGANATH : We would be creating a very bad precedent.

(Interruptions)

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಿಲುವಳಿ ಸೂಚನೆಯ ಮುಖಾಂತರ ರಾಜ್ಯದ ಬಹಳ ಮಹತ್ವಪೂರ್ಣವಾದಂತಹ ಸಮಸ್ಯೆಯ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಾವು ಈ ವಿಷಯವನ್ನು ಯಾವ ಫಾರ್ಮ್‌ನಲ್ಲಿ ಬೇಕಾದರೂ ಚರ್ಚೆಗೆ ಅವಕಾಶವನ್ನು ಮಾಡಿಕೊಡಿ. ಆದರೆ ಪ್ರಶ್ನೆ ಬಂದಿರುವಂಥಾದ್ದು ಏನೆಂದರೆ ಇದು ಅಟಾನಮಸ್ ಬಾಡಿಯಾದ ಕಾರಣ ಇದನ್ನು ನಿಲುವಳಿ ಸೂಚನೆಯಲ್ಲಿ ತೆಗೆದುಕೊಳ್ಳಬಹುದಾ? ಎನ್ನುವಂಥಾದ್ದು ಪ್ರಶ್ನೆಯಾಗಿದೆ. ನಾವು ಇಲ್ಲಿ ಇದರ ಬಗ್ಗೆ ಚರ್ಚೆಯಾಗುವುದಕ್ಕೆ ಯಾರು ಅಡ್ಡಿ ಮಾಡುತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಈಗ ಕಾರ್ಪೊರೇಷನ್ ಎನ್ನುವ ಪ್ರಶ್ನೆಗಿಂತಲೂ ನನ್ನದು ಒಂದು ಕ್ರಿಯಾಲೋಪವಿದೆ. ನನ್ನ ಕ್ರಿಯಾಲೋಪವೇನೆಂದರೆ, ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ, ಅವರು ಭಾಷಣ ಮಾಡಿರುವಂಥಾದ್ದಕ್ಕೆ ಅವರಿಗೆ ಈ ಸಭೆ ಗೌರವವನ್ನ ಸಲ್ಲಿಸುವಂಥಾದ್ದು ಮತ್ತು ಆಚಳಿತಕ್ಕೆ ಸಂಬಂಧಿಸಿದಂತೆ ಪ್ರಸ್ತಾಪ ಮಾಡುವಂಥಾದ್ದು ನಡೆದುಕೊಂಡು ಬಂದಿರುವಂತಹ ಒಂದು ಸಂಪ್ರದಾಯವಾಗಿದೆ.

ಅಧ್ಯಕ್ಷರು : ಅನುಮತಿ ಕೊಟ್ಟಿದ್ದೇನೆಂದರೆ, 10-12 ಜನರು ಮಾತನಾಡುವುದಕ್ಕಾಗುವುದಿಲ್ಲ ಯಾರಾದರೂ ಇಬ್ಬರು ಮಾತನಾಡಿ ಎಂದು ಹೇಳಿದೆ; ಮಾನ್ಯ ಚಂದ್ರೇಗೌಡರು ಅಲ್ಲಿ ಇದ್ದರು, ತೀರ್ಮಾನವಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಸನ್ಮಾನ್ಯ ಅಧ್ಯಕ್ಷರೆ, 1962 ರಲ್ಲಿ ಇದೇ ರೀತಿಯ ಪ್ರಶ್ನೆ ಬಂತು, ಆಗ ಮಾನ್ಯ ದಿವಂಗತ ಬಾಳಿಗರವರು ಅಧ್ಯಕ್ಷರಾಗಿದ್ದರು, ದಿವಂಗತ ಗೋಪಾಲಗೌಡರನ್ನು ನನ್ನ ಕೊಠಡಿಗೆ ಬಂದು ಮಾತನಾಡಿ ಎಂದು ಹೇಳಿದರು. ಆಗ ಗೋಪಾಲಗೌಡರು, ಪುಸ್ತಕವನ್ನು ತೋರಿಸಿ ನಿಮ್ಮ ಕೊಠಡಿಗೆ ಬರಬೇಕೆಂದು ಎಲ್ಲಿದೆ ಹೇಳಿ ಎಂದು ಕೇಳಿದರು. ಎಲ್ಲವೂ ಕೂಡ ಈ ಸದನದಲ್ಲಿ ತೀರ್ಮಾನವಾಗಬೇಕೆ? ವಿನಹಃ ತಮ್ಮ ಕೊಠಡಿಯಲ್ಲಿ ತೀರ್ಮಾನವಾದರೆ ಏನು ಪ್ರಯೋಜನವಾಗುತ್ತದೆ?

ಅಧ್ಯಕ್ಷರು : ಇನ್ನು ಮುಂದೆ ಅದೇ ರೀತಿ ಇಲ್ಲೇ ತೀರ್ಮಾನ ಮಾಡೋಣ, ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಕೆ.ಹೆಚ್.ರಂಗನಾಥ್ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಇರುವುದು, ಈ ವಿಚಾರ ಕರ್ಪೊರೇಷನ್‌ಗೆ ಸಂಬಂಧಿಸಿದ್ದೋ ಇಲ್ಲವೋ ಎನ್ನುವುದಿಲ್ಲ. ತಮ್ಮ ತೀರ್ಮಾನ ರಾಜ್ಯಪಾಲರು ಭಾಷಣ ಮಾಡಿದ ಮೇಲೆ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯಕ್ಕೆ ಅವಕಾಶ ಮಾಡಿಕೊಡಬೇಕು, ಇದನು ಅತಿ ಜಾಗ್ರತೆ ಮಾಡುವುದು ತಮ್ಮ ಕರ್ತವ್ಯವಾಗುತ್ತದೆ. ರಾಜ್ಯಪಾಲರನ್ನು ಈ ಸದನಕ್ಕೆ ಕರೆದು ಇಲ್ಲಿ ಭಾಷಣ ಮಾಡಿ ಎಂದು ಹೇಳಿದ್ದೀರಿ. ವರ್ಷದ ಆಡಳಿತಕ್ಕೆ ಸಂಬಂಧಿಸಿದಂತೆ ಅವರ ಭಾಷಣದ ಮುಖಾಂತರ ಈ ಸದನದ ಮುಂದೆ ಇಟ್ಟಿದ್ದೀರಿ. ಅವರು ಮಾಡಿದ ಭಾಷಣಕ್ಕೆ ವಂದನೆ ಸಲ್ಲಿಸುವುದು ಈ ಸದನದ ಪ್ರಥಮ ಕರ್ತವ್ಯ. ಹೀಗಿರುವಾಗ ಮತ್ತೊಂದು ಪ್ರಶ್ನೆಯನ್ನು ತಂದು ವಿಷಯವನ್ನು ಪ್ರಸ್ತಾಪ ಮಾಡುವುದು ಸರಿಯೇ ಎನ್ನುವುದು ಮೊದಲನೆಯದು. ನಾನು ದಿವಂಗತ ಗೋಪಾಲಗೌಡರ ವಿಚಾರವನ್ನು ಇಲ್ಲಿ ಏತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ, ರಾಜ್ಯಪಾಲರ ಭಾಷಣವಾದ ನಂತರ ಬಿಸ್‌ನೆಸ್ ಅಡ್ವೈಸರಿ ಕಮಿಟಿ ಸಭೆ ನಡೆದಿದೆ, ಅಲ್ಲಿ ಈ ವಾರ ಏನು ನಡೆಯಬೇಕೆನ್ನುವದು ತೀರ್ಮಾನವಾಗಿದೆ, ಅದನ್ನು ವಿಧಾನಸಭೆಯ ಕಾರ್ಯದರ್ಶಿಯವರ ಮುಖಾಂತರ ಸದನದ ಮುಂದೆ ಇಡಲಾಗಿದೆ, ಸದನ ಒಪ್ಪಿದೆ, ಆ ಪ್ರಕಾರ ಕಾರ್ಯ ಕಲಾಪಗಳು ನಡೆಯಬೇಕಾಗುತ್ತದೆ. ಅಂತಹ ಸಮಯದಲ್ಲಿ ಇನ್ನೇನು ಆಕಾಶ ಬಿದ್ದು ಹೋಯಿತೆನ್ನುವ ಸಮಸ್ಯೆ ಬಂದರೆ ವಿಷಯವನ್ನು ಪ್ರಸ್ತಾಪ ಮಾಡಬಹುದು, ಅದನ್ನು ಬಿಟ್ಟು ನಾರ್ಮಲ್ ಪ್ರೊಸೀಜರ್ ಇರುವಾಗ ಇಂತಹ ನಿಲುವಳಿ ಸೂಚನೆಯನ್ನು ತರುತ್ತೇನೆ, ನಿಮ್ಮ ಮನವೊಲಿಸುತ್ತೇನೆ, ಅದಕ್ಕೆ ಅವಕಾಶ ಮಾಡಿ ಕೊಡಿ ಎನ್ನುವುದು ಸಾಧ್ಯವಾಗಲಾರದು. ಅದಕ್ಕಾಗಿ ನಾನು ಸ್ವಲ್ಪ ಕಟುವಾಗಿ, We would be creating a very bad precedent if you were to permit such extraneous matters. ಎಂದು ಹೇಳಿದೆ. ತಾವು ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡುವುದು ಸರಿಯಲ್ಲ. ಯಾರು ಮಾನ್ಯ ಸದಸ್ಯರು ಮಾನ್ಯ ರಾಜ್ಯ ಪಾಲರ ಭಾಷಣಕ್ಕೆ ಗೌರವ ಸಲ್ಲಿಸುವ ವಂದನಾರ್ಪಣೆಯನ್ನು ಸಲ್ಲಿಸಬೇಕೆಂದಿದ್ದಾರೆ ಅವರಿಗೆ ಅವಕಾಶ ಮಾಡಿಕೊಟ್ಟು, ಸ್ವಲ್ಪ ಸಮಯ ಅವರು ಮಾತನಾಡಿದ ನಂತರ ವಿರೋಧಪಕ್ಷದ ಸವಿಸ್ತಾರವಾಗಿ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುವುದು ಬಿಡುವುದು ತಮ್ಮ ನಿರ್ಧಾರಕ್ಕೆ ಬಿಟ್ಟದ್ದು. ಅದನ್ನು ಬಿಟ್ಟು ನಿಲುವಳಿ ಸೂಚನೆಯನ್ನು ತಂದು ಅದನ್ನು ನಿಯಮ69ಕ್ಕೆ ಪರಿವರ್ತನೆ ಮಾಡುತ್ತೇವೆಂದು ಮತ್ತೆ ನಾಲ್ಕು ದಿವಸ ಹೋದರೆ ಏನು ಪ್ರಯೋಜನಕ್ಕೆ ಬರುತ್ತದೆ? They why should be have a Business Advisory Committee? For what purpose? What should be the dicision that we take there ? What transpires there - we are not suposed to disclose.

ಅದನ್ನು ಕಾರ್ಯದರ್ಶಿಗಳು ತಮ್ಮ ಅಪ್ಪಣೆಯ ಮೇರೆಗೆ ಈ ಸದನದ ಮುಂದಿಟ್ಟಿದ್ದಾರೆ, ನಾವು ಅದನ್ನು ಅನುಮೋದನೆ ಮಾಡಿದ್ದೇವೆ, to deviate from that would not be correct.

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸಚಿವರು ತಿಳಿಸಿದಂತೆ ಪ್ರತಿ ದಿವಸ ಈ ಸದನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ರಾಜ್ಯಪಾಲರ ಭಾಷಣಕ್ಕೆ ಗೌರವ ಸಲ್ಲಿಸುವ ವಂದನಾ ನಿರ್ಣಯದ ಚರ್ಚೆ ಇದ್ದೇ ಇರುತ್ತದೆ. ಅದಕ್ಕೆ ಅಗೌರವ ಸೂಚಿಸುವ ಉದ್ದೇಶ ಯಾರದೂ ಅಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ರಾಜ್ಯಪಾಲರ ಭಾಷಣಕ್ಕೆ ಗೌರವ ಸಲ್ಲಿಸುವ ವಂದನಾ ನಿರ್ಣಯ ಮೊದಲು ಚರ್ಚೆಗೆ ಸದನ ತೆಗೆದುಕೊಳ್ಳಬೇಕೆಂದು ಹೇಳಿದೆ, ಅಗೌರವ ಸೂಚಿಸುವುದೆಂದು ಹೇಳಲಿಲ್ಲ.

Sri B.N. Bachegowda : The Speaker has got every right.

Under Rule 22(3) " the discussion on the Address shall be interrupted in the course of a sitting by an adjournment motion under rule 60. Rule 60 Prevails.

ಅದನ್ನೆಲ್ಲಾ ಒವರ್ ರೈಡ್ ಮಾಡಿ ಅಧ್ಯಕ್ಷರಾದ ತಾವು ಚರ್ಚೆಗೆ ಅವಕಾಶ ಕೊಡಬಹುದು. ತಾವು ಅವಕಾಶ ಮಾಡಿ ಕೊಟ್ಟರೆ ಮುಗಿಯತ್ತದೆ.

ಅಧ್ಯಕ್ಷರು: ಚರ್ಚೆಗೆ ವಿಷಯವನ್ನು ತೆಗೆದುಕೊಳ್ಳಬೇಕೇ ಬೇಡವೇ ಎನ್ನುವುದು ಇನ್ನು ಆರ್ಗ್ಯುಮೆಂಟ್ ಸ್ಟೇಜ್‌ನಲ್ಲೆ ಇದೆ, ಇನ್ನು ಕೊಟ್ಟಿಲ್ಲವಲ್ಲ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರುಗಳು ಕೆಲವು ವಿಚಾರಗಳನ್ನು ತಮ್ಮ ಹಾಗೂ ಸದನದ ಗಮನಕ್ಕೆ ಎಂದಿದ್ದಾರೆ. ಅವರಿಬ್ಬರೂ ಹಿಂದೆ ಈ ವಿಧಾನಸಭೆಯ ಅಧ್ಯಕ್ಷರಾಗಿದ್ದರು, ನಾನು ಕೂಡ ವಿಧಾನಸಭೆಯ ಅಧ್ಯಕ್ಷನಾಗಿದ್ದೆ, ಆದುದರಿಂದ ಅವರಿಂದ ನಾನು ಉತ್ತೇಜಿತನಾಗಿ ತಮ್ಮ ಮುಂದೆ ಮಾತನಾಡುವ ಧೈರ್ಯ ಮಾಡಿದ್ದೇನೆ. ಸದನ ಯಾವ ರೀತಿ ನಡೆಯಬೇಕು ಎಂಬುದಕ್ಕೆ ನಿರ್ದೇಶನ ಮಾಡುವವರು, ಅದಕ್ಕೆ ಸ್ಫೂರ್ತಿ ತಂದುಕೊಡುವವರು ತಾವು. ನೀವು ಈ ಸದನದ ಗೊತ್ತುಗುರಿಗಳಿಗೆ ಅಂತಿಮವಾಗಿ ಜವಾಬ್ದಾರರಾಗಿದ್ದೀರಿ, ಅದರಲ್ಲಿ ನಾವು ಸಹಕಾರ ಕೊಡಲು, ಇಲ್ಲಿ ಸಭಾನಾಯಕನಾಗಿ ನಾನು ಕುಳಿತಿದ್ದೇನೆ, ಅಲ್ಲಿ ವಿರೋಧಪಕ್ಷದ ನಾಯಕರಾಗಿ ಅವರು ಕುಳಿತಿದ್ದಾರೆ. ಮಾನ್ಯ ವಿರೋಧಪಕ್ಷದವರು ಕಳುಹಿಸಿಕೊಟ್ಟಿರುವ ನಿಲುವಳಿ ಸೂಚನೆಯ ವಿಚಾರ ರಾಯಚೂರಿನ ಥರ್ಮಲ್ ಪ್ಲಾಂಟಿನಲ್ಲಿ ನಿನ್ನೆ ಒಂದು ಸ್ಫೋಟವಾಗಿ ವಿದ್ಯುತ್ ಕೊರತೆಯುಂಟಾಗಿದೆ, ಅದನ್ನು ನಿಲವಳಿ ಸೂಚನೆ6ಯ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಲು ತಮಗೆ ಮನವಿ ಸಲ್ಲಿಸಿದ್ದಾರೆ. ಮಾನ್ಯ ಸಂಸದೀಯ ಸಚಿವರು ಯಾವುದನ್ನು ನಿಲವಳಿ ಸೂಚನೆಯಡಿಯಲ್ಲಿ ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ಅರ್ಹತೆ ಪಡೆಯುತ್ತದೆ, ಯಾವುದು ನಿಲುವಳಿ ಸೂಚನೆಯಾಗುವುದಕ್ಕೆ ಅನಯರ್ಹತೆ ಪಡೆಯು6ತ್ತದೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ತಮ್ಮ ಗಮನಕ್ಕೆ ತಂದಿದ್ದಾರೆ. ಜೊತೆಗೆ ನಮ್ಮ ಸಂವಿಧಾನದ ಅಬ್ಲಿಗೇಷನ್ಸ್ ಏನೇನು ಇವೆ ಎನ್ನುವುದನ್ನು ಕೂಡ ಮಾನ್ಯ ಸಂಸದೀಯ ಸಚಿವರು ಹಾಗೂ ಸಚಿವರಾದ ರಂಗನಾಥ್‌ರವರು ತಮ್ಮ ಗಮನಕ್ಕೆ ತಂದಿದ್ದಾರೆ. ರಜ್ಯಾಪಾಲರನ್ನು ರಾಜ್ಯಾಂಗದ ಚೌಕಟ್ಟಿನಲ್ಲಿ ನಾವು ಏತಕ್ಕೆ ಭಾಷಣ ಮಾಡಲು ಆಹ್ವಾನ ಮಾಡುತ್ತೇವೆ? ರಾಜ್ಯದ ಬೆಳವಣಿಗೆಗಳ ಒಂದು ವಿಹಂಗಮ ನೋಟವನ್ನು ರಾಜ್ಯಪಾಲರ ಭಾಷಣದಲ್ಲಿ ಕೊಡಲಾಗುತ್ತದೆ; ಅದರ ಅರ್ಥವೇನೆಂದರೆ , ಆ ಭಾಷಣದ ಮೇಲೆ 5-6 ದಿವಸಗಳ ಕಾಲ ಚರ್ಚೆ ನಡೆಯುತ್ತದೆ, ಮಾನ್ಯ ಸಂಸದೀಯ ಸಚಿವರು ಹೇಳಿದಂತೆ. anything under the Sun and under the Moon can be discussed. I don't know about the Moon, but under the Sun it can be discussed.

ನಾನು ಬಹಳ ವಿನೀತನಾಗಿ ತಾವು ಹಾಗೂ ಮಾನ್ಯ ವಿರೋಧಪಕ್ಷದ ನಾಯಕರು ರಾಜ್ಯಪಾಲರ ಭಾಷಣದ ಪುಟ ಸಂ: 28 ಹಾಗೂ 29 ಅನ್ನು ಗಮನಿಸಬೇಕೆಂದು ಹೇಳಬಯಸುತ್ತೇನೆ. ವಿದ್ಯುತ್ ಸಮಸ್ಯೆಗಳ ಬಗ್ಗೆ ನಮೂದಿತವಾಗಿದೆ. ರಾಜ್ಯಪಾಲರ ಭಾಷಣಕ್ಕೆ ಗೌರವ ಸಲ್ಲಿಸುವ ವಂದನಾ ನಿರ್ಣಯ

ಯಾವಾಗ ಸದನದ ಮುಂದೆ ಬರುತ್ತದೆ, ಆಗ ತಮ್ಮ ತೀವ್ರವಾದ ಅನಿಸಿಕೆಗಳನ್ನು ಸದನದ ಹಾಗೂ ರಾಜ್ಯದ ಗಮನಕ್ಕೆ ತರುವ ಪೂರ್ಣ ಹಾಗೂ ಮುಕ್ತವಾದ ಅವಕಾಶ ವಿರೋಧ ಪಕ್ಷದ ನಾಯಕರಿಗಿದೆ. ಮಾಡಬಾರದೆನ್ನುವ ದೃಷ್ಟಿ ನಮ್ಮದಲ್ಲ. ಯಾವ್ಯಾವ ವಿಚಾರಗಳನ್ನು ಯಾವ್ಯಾವ ಸಮಯದಲ್ಲಿ ಪ್ರಸ್ತಾಪ ಮಾಡಬೇಕೆನ್ನುವುದಕ್ಕೆ ನಾವೇ ರಚಿಸಿಕೊಂಡಿರುವ ನಿಯಮಾವಳಿಗಳು ಒಂದು ಕಡೆ ಇದೆ,

12.50 ಪಿ.ಎಂ.

ನಾವೇ ರಚಿಸಿಕೊಂಡಿರತಕ್ಕಂಥ ರಾಜ್ಯಾಂಗ ಒಂದು ಕಡೆ ಇದೆ. ಈ ಸಭೆ, ರಾಜ್ಯಾಂಗ ಮತ್ತು ನಾವು ಒಪ್ಪಿಕೊಂಡಿರತಕ್ಕಂಥ ನಿಯಮಾವಳಿಗಳ ಮಧ್ಯೆ ನಡೆಯಬೇಕಾಗಿದೆ. ಈ ಸಂಸ್ಥೆ ಒಂದು ಅಟಾನಮಸ್ ಬಾಡಿ ಎಂದು ಅವರು ಈಗಾಗಿಲೇ ಹೇಳಿದ್ದಾರೆ. ಅಂದರೆ, ಈ ಸಭೆಗೆ ಅದರ ಬಗ್ಗೆ ಚರ್ಚೆ ಮಾಡಲು ಅಧಿಕಾರವಿಲ್ಲ, ನಿಲುವಳಿ ಸೂಚನೆಯ ಮೂಲಕ ಚರ್ಚೆ ಮಾಡಲು ಅನರ್ಹತೆಯನ್ನು ಪಡೆಯುತ್ತದೆ ಎನ್ನುವುದು ನಮ್ಮ ನಿಲುವು. ಅದರ ಬಗ್ಗೆ ತಮ್ಮ ರೂಲಿಂಗ್ ಅನ್ನು ನಾವು ಅಪೇಕ್ಷೆ ಮಾಡುತ್ತೇವೆ. ಏಕೆಂದರೆ, ಈ ಸಭೆ ಹಳಿ ತಪ್ಪಿ ನಡೆಯಲು ನಾವು ಬುದ್ಧಿಪೂರ್ವಕವಾಗಿ ಅವಕಾಶವನ್ನು ಕೊಡತಕ್ಕಂಥಾದ್ದು ಸಾಧುವಲ್ಲ. ಆದ್ದರಿಂದ, ದಯವಿಟ್ಟು ತಾವು ಆದಿಕ್ಕಿನಲ್ಲಿ ಯೋಚನೆ ಮಾಡಬೇಕು. ನಂತರ ತಾವು ಕೊಡುವ ಬುದ್ಧಿಪೂರ್ವಕವಾದ ತೀರ್ಮಾನಕ್ಕೆ ನಾವು ತಲೆಬಾಗಿ ವಂದಿಸಿ ಅದರಿಂತೆ ನಡೆಸಿಕೊಂಡು ಹೋಗುತ್ತೇವೆ. ಅವರಿಗೆ ಅವಕಾಶವನ್ನು ಕೊಡುವ ಮುನ್ನ ನಾವು ತಮ್ಮ ಗಮನಕ್ಕೆ ತಂದಿರುವ ಕೆಲವು ವಿಚಾರಗಳ ಬಗೆಗೆ ರೂಲಿಂಗ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಕೊಟ್ಟಂಥ ನಿಲುವಳಿ ಸೂಚನೆಯನ್ನು ಅಥವಾ ಮಾನ್ಯ ಸಿಂಧ್ಯಾರವರು ಕೊಟ್ಟಂಥ ನಿಲುವಳಿ ಸೂಚನೆಯನ್ನು ಅವರು ಪೂರ್ತಿ ಓದಿದ ಹಾಗೆ ಕಾಣುವುದಿಲ್ಲ. ಮೊನ್ನೆ ರಾಯಚೂರು ಥರ್ಮಲ್ ಪ್ಲಾಂಟಿಂಗೆ ಬೆಂಕಿ ಹೊತ್ತಿಕೊಂಡು 50 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎನ್ನುವುದನ್ನು ಪ್ರಸ್ತಾಪ ಮಾಡಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿದರು. ಅದರ ಬಗ್ಗೆ ನಮ್ಮ ನಿರ್ದಿಷ್ಟವಾದ ಪ್ರಸ್ತಾಪವಿಲ್ಲ. ಆದರೆ ನಾವು ವಿಷಯವನ್ನು ಪ್ರಸ್ತಾಪ ಮಾಡುವಾಗ ಅದೂ ಬರುತ್ತದೆ. ಆದರೆ ಬಹು ಮುಖ್ಯವಾಗಿ ನಾವು ಪ್ರಸ್ತಾಪ ಮಾಡಿರುವುದು ಶೆ. 17ರಷ್ಟು ಏರಿಸಿರುವ ಪವರ್ ಟ್ಯಾರಿಫ್ ಮತ್ತು ವಿದ್ಯುಚ್ಛಕ್ತಿ ತೊಂದರೆಗಳ ಬಗ್ಗೆ. ವಿದ್ಯುಚ್ಛಕ್ತಿ ಅಭಾವದಿಂದ, ದರ ಏರಿಕೆಯಿಂದ ಹಾಗೂ ಇನ್ನಿತರ ಹಲವಾರು ಕಾರಣಗಳಿಂದ ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಅದು ಒಂದು ಅಟಾನಮಸ್ ಬಾಡಿ ಇರಬಹುದು. ಆದರೆ ಸರ್ಕಾರದವರು ಅದಕ್ಕೆ ಅನುದಾನ ಕೊಡುತ್ತಿಲ್ಲವೇ? ಅವರು ಸ್ವತಂತ್ರವಾಗಿ ಮಾಡುತ್ತಿದ್ದಾರೇನು? ನೀವು ಅವರಿಗೆ ವರ್ಷೇವರ್ಷ 500-600-800ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದೀರಿ. ಅಂದರೆ ನಿಮ್ಮ ಕೆಳಗೆ ಅವರು ಕೆಲಸ ಮಾಡುತ್ತಿದ್ದಾರೆ. ಎಂದು ಅರ್ಥ. ಅದು ಇರಲಿ, ಅದರ ಬಗ್ಗೆ ಚರ್ಚೆ ಮಾಡೋಣ. ಆದರೆ ಇವತ್ತು ತಾವು ದಯವಿಟ್ಟು, ಮಾನ್ಯ ಸಿಂಧ್ಯಾರವರು ಕೊಟ್ಟಿರುವಂಥ ಮತ್ತು ನಾನು ಕೊಟ್ಟಿರುವಂಥ ಎರಡೂ ನಿಲುವಳಿ ಸೂಚನೆಗಳನ್ನು ತೆಗೆದುಕೊಳ್ಳಬೇಕು. ಇದು ಸಾರ್ವಜನಿಕ ಮಹತ್ವದ ವಿಷಯವಾಗಿದ್ದು, ವಿದ್ಯುತ್ ದರ ಏರಿಕೆಯಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳು ಏನು ತೊಂದರೆಗಳನ್ನು ಅನುಭವಿಸುತ್ತಿವೆ, ಮತ್ತು ಮಧ್ಯಮ ವರ್ಗದ ಜನರಿಗೆ ಏನು ತೊಂದರೆಯಾಗಿದೆ ಎನ್ನುವ ಬಗ್ಗೆ ನಾವು ಪ್ರಸ್ತಾಪ ಮಾಡಬೇಕಾಗಿದೆ. ಇವತ್ತು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಜನರ

ತೊಂದರೆಗಳು ಬರಬಾರದೆಂಬ ಉದ್ದೇಶದಿಂದ ಈ ಕಾಯ್ದೆಯನ್ನು ತರಲಾಗಿದೆ. ಈ ಕಾಯ್ದೆಯಲ್ಲಿ ಯಾವುದೇ ಲೋಪದೋಷಗಳಿಲ್ಲ. ಆದರೆ ಕೆಲವು ಕಡೆ ಕೆಲವು ಅಧಿಕಾರಿಗಳು ಈ ಕಾಯ್ದೆಯ ಸದುದ್ದೇಶವನ್ನು ಈಡೇರಿಸಲು ಸಹಕರಿಸುತ್ತಿಲ್ಲ. ಅಂತಹ ಅಧಿಕಾರಿಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರ ಸಿದ್ಧವಿದೆ. ಈ ಕಾಯ್ದೆಯ ಬಗ್ಗೆ ಯಾವುದೇ ಅಪಸ್ವರ ಇಲ್ಲ. ಆದ್ದರಿಂದ ಈ ಕಾಯ್ದೆಯ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳಿದರು.

ಶ್ರೀ ಎಂ. ಸಿದ್ದಯ್ಯ: ಸಭಾಪತಿಗಳವರೆ, ಈ ಕಾಯ್ದೆಯ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕು. ಈ ಕಾಯ್ದೆಯಲ್ಲಿ ಕೆಲವು ಲೋಪದೋಷಗಳಿವೆ. ಅವುಗಳನ್ನು ಸರಿಪಡಿಸಲು ಸರ್ಕಾರ ಸಿದ್ಧವಿದೆ ಎಂದು ಸಚಿವರು ಹೇಳಿದ್ದಾರೆ. ಆದ್ದರಿಂದ ಈ ಕಾಯ್ದೆಯ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕು.

ಶ್ರೀ ಎಸ್. ಆರ್. ಪಾಟೀಲ್: ಸಭಾಪತಿಗಳವರೆ, ಈ ಕಾಯ್ದೆಯ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕು. ಈ ಕಾಯ್ದೆಯಲ್ಲಿ ಕೆಲವು ಲೋಪದೋಷಗಳಿವೆ. ಅವುಗಳನ್ನು ಸರಿಪಡಿಸಲು ಸರ್ಕಾರ ಸಿದ್ಧವಿದೆ ಎಂದು ಸಚಿವರು ಹೇಳಿದ್ದಾರೆ. ಆದ್ದರಿಂದ ಈ ಕಾಯ್ದೆಯ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕ

ಆಡಳಿತ ಪಕ್ಷದಲ್ಲಿರತಕ್ಕಂಥ ಇನ್ನಿತರ ಪ್ರಮುಖರುಗಳು ವಿರೋಧ ಪಕ್ಷದಲ್ಲಿದ್ದಾಗ ಪಾಲನೆ ಮಾಡಿದ್ದರೂ ಒಪ್ಪಿಕೊಳ್ಳುತ್ತಿದ್ದೆ. ಕೆ.ಎಸ್.ಆರ್.ಟಿ.ಸಿ. ಒಂದು ಸ್ವಾಯತ್ತ ಸಂಸ್ಥೆಯಲ್ಲವೇ? ಅದರ ಬೆಲೆಗಳನ್ನ ಜಾಸ್ತಿ ಮಾಡಿದಾಗ ನೀವು ಏಕೆ ನಿಲುವಳಿ ಸೂಚನೆ ತೆಗೆದುಕೊಂಡು ಬಂದು ಚರ್ಚೆ ಮಾಡಲು ಅವಕಾಶ ಕೇಳಿದಿರಿ? ಆವತ್ತು ಅಧ್ಯಕ್ಷರು ನಿಲುವಳಿ ಸೂಚನೆಗೆ ಅವಕಾಶ ಕೊಟ್ಟರಲಿಲ್ಲವೇ? ನಾವು ಅನೇಕ ಸಂದರ್ಭಗಳಲ್ಲಿ ಅಧ್ಯಕ್ಷರ ಕೊಠಡಿಯಲ್ಲಿ ಕುಳಿತು ಚರ್ಚೆಯನ್ನು ಮಾಡುತ್ತೇವೆ. ಅಧಿಕಾರಿಗಳನ್ನೂ ಕರೆಸಿದ್ದೇವೆ, ಮಾನ್ಯ ವಿರೇಂದ್ರ ಪಾಟೀಲರು ಮುಖ್ಯಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಫೈಲ್ ಅನ್ನೂ ಸಹ ಅಧ್ಯಕ್ಷರ ಕೊಠಡಿಗೆ ತರಿಸಿದ್ದೇವೆ. ಇವತ್ತು ಅಲ್ಲಿಗೆ ಮಾನ್ಯ ಚಂದ್ರೇಗೌಡರು ಬಂದಿದ್ದರು. ಇದು ಒಂದು ಮಹತ್ವದ ಪ್ರಶ್ನೆ ಇವತ್ತು ಕರ್ನಾಟಕ ರಾಜ್ಯ ಕಾರ್ಗತ್ತಲಿನಲ್ಲಿದೆ, ರಾಜ್ಯ ಕಾರ್ಗತ್ತಲಾಗಿದೆ, ಇದು 8- 10 ದಿವಸಗಳಲ್ಲಿ ಸರಿ ಹೋಗುವುದಿಲ್ಲ. ಇದರ ಬಗ್ಗೆ ನಾವು ಪ್ರಸ್ತಾಪ ಮಾಡಬೇಕು ಎಂದು ಹೇಳಿದಾಗ, ಆಯಿತುಕ, ನೀವು ಪ್ರಸ್ತಾಪ ಮಾಡಿ ಎಂದು ಹೇಳಿ, ಈಗ ಇಲ್ಲಿ ಬಂದು ನೀವು ಈ ರೀತಿ ನ್ಯಾಯ ತೆಗೆದರೆ, ಸಭಾದ್ಯಕ್ಷರನ್ನು ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಸಿದರೆ ಇದು ಯಾವ ನ್ಯಾಯ? ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದರಲ್ಲಿ ಇವತ್ತು ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ನಾವು ಹೇಳಬೇಕಾಗಿದೆ. ಇದು ಸರ್ಕಾರದ ನೇರವಾದ ಜವಾಬ್ದಾರಿಯಾಗಿದೆ. ಆದ್ದರಿಂದ, ದಯಮಾಡಿ ನಾವು ತಮ್ಮಲ್ಲಿ ಅತ್ಯಂತ ವಿನಯಪೂರ್ವಕವಾಗಿ ನಮ್ರತೆಯಿಂದ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇವೆ. ಸಬ್ ಮಿಷನ್ ಮಾಡಲು ನಮಗೆ ಅವಕಾಶ ಕೊಡಿ. ಉಳಿದದ್ದು ತಾವು ಏನು ಹೇಳಿದರೂ ನಾವು ಒಪ್ಪಿಕೊಳ್ಳುತ್ತೇವೆ. ರಾಜ್ಯಪಾಲರ ಭಾಷಣದ ಬಗ್ಗೆ ವಂದನಾ ನಿರ್ಣಯದ ಮೇಲೆ ಭಾಷಣವನ್ನು ಪ್ರಾರಂಭ ಮಾಡಲು ನಾವು ಒಪಿಕೊಂಡಿದ್ದೇವೆ, ಅದನ್ನು ಮಾಡೋಣ. ಆದರೆ ನಮ್ಮ ಪ್ರಿಲಿಮಿನರಿ ಸಬ್ ಮಿಷನ್ ಗೆ ಅವಕಾಶ ಮಾಡಿಕೊಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಿಂಧ್ಯಾರವರು ಧ್ವನಿ ಎರಿಸಿ ಹೇಳಿಬಿಟ್ಟರೆ ನಾವು ಒಪ್ಪಿಕೊಳ್ಳಬೇಕು ಎಂದೇನೂ ಇಲ್ಲ. ನಾನು ಒಪ್ಪಿಕೊಂಡಿರತಕ್ಕಂಥಾದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಚಂದ್ರೇಗೌಡರಿಗೆ ಬೇಕಾದ ಹಾಗೆ ಸಂಗೀತ ನುಡಿಸಲು ಆಗುವುದಿಲ್ಲ. ನಾನು ಬಂದಿರುವುದೇ ಇದಕ್ಕೆ. ಜನ ನನ್ನನ್ನು ಆರಿಸಿ ಕಳುಹಿಸಿರುವುದು ಇವರಿಗೆ ಬೇಕಾದ ಹಾಗೆ ಸಂಗೀತ ಹೊಡೆಯಲು ಅಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಚಂದ್ರೇಗೌಡರು ಒಪ್ಪಿಕೊಂಡು ಬಿಟ್ಟು ಈಗ ಇಲ್ಲಿ ಬಂದು ವಿರೋಧ ಮಾಡುತ್ತಿದ್ದಾರೆ ಎಂದರೆ ಹೇಗೆ? ನಾನು ನಿಲುವಳಿ ಸೂಚನೆಗೆ ಒಪ್ಪಿಕೊಂಡಿದ್ದೇನೆ?

(ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಿಲ್ಲ)

(ಅನೇಕ ಜನ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : (ಅವರು ಹೇಳುತ್ತಿರುವಂಥಾದ್ದು ಅವರ ಅನುಭವಕ್ಕೆ, ಅವರಿಗೆ ಇರತಕ್ಕಂಥ ಸಂಸದೀಯ ನಡವಳಿಕೆಗೆ ಸೂಕ್ತವಲ್ಲ ಎಂದು ನಾನು ಹೇಳಲೇಬೇಕಾಗುತ್ತದೆ.) ನಾನು ಹೇಳಿದ್ದು ಏನೆಂದರೆ, ನಾವು ಈಗಲೂ ಚರ್ಚೆಗೆ ಸಿದ್ಧರಿದ್ದೇವೆ. ನನ್ನ ಆಕ್ಷೇಪಣೇ ಇರತಕ್ಕಂಥಾದ್ದು

ಏನೆಂದರೆ, ಇದನ್ನು ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡಲು ಆಗುವುದಿಲ್ಲ. ಚರ್ಚೆ ಮಾಡಲು ಒಪ್ಪಿಕೊಂಡಿದ್ದರು ಎಂದರೆ ಏನು? ನನಗೂ ಜವಾಬ್ದಾರಿ ಇದೆ. ನಾನು 30 ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿ, ಸಂಸದೀಯ ನಡವಳಿಕೆಯಲ್ಲಿ ಕೆಲಸ ಮಾಡಿದ್ದೇನೆ. ಅಷ್ಟು ಲಘುವಾಗಿ ಮಾತನಾಡುವುದು ಬೇಕಾಗಿಲ್ಲ. ಈಗಲೂ ಹೇಳುತ್ತೇನೆ, ನಾನು ಚರ್ಚೆಗೆ ಸಿದ್ಧವಾಗಿದ್ದೇನೆ. ಆದರೆ ನಿಲುವಳಿ ಸೂಚನೆಯ ಕೆಳಗೆ ಅಲ್ಲ. ನಿಯಮ 69 ರ ಕೆಳಗೆ ಚರ್ಚೆ ಮಾಡಬಹುದು. ಎರಡನೆಯದಾಗಿ, ನಿಲುವಳಿ ಸೂಚನೆಗೆ ಎರಡು ನೋಟೀಸುಗಳಿವೆ. ನಾನು ತಮ್ಮ ಗಮನಕ್ಕೆ ತರತಕ್ಕಂಥಾದೆಂದರೆ. "A motion must not raise on more than one issue " ಎಂದು ಇದೆ. ಈಗ ಇಲ್ಲಿ ಎಷ್ಟು ವಿಷಯಗಳಿವೆ. ನೂರೆಂಟು ವಿಷಗಳಿವೆ ಎಂದು ಅವರೇ ಹೇಳಿದ್ದಾರೆ. ಎಲ್ಲದಕ್ಕೂ ನಿಲುವಳಿ ಸೂಚನೆ ತರಲು ಆಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ : ನೂರೆಂಟು ವಿಷಯಗಳು ಯಾವುದು ಎಂದು ಹೇಳಿದ್ದೇನೆ ಎನ್ನುವುದನ್ನು ಹೇಳಿ. ರಾಜ್ಯಪಾಲರ ಭಾಷಣದಲ್ಲಿ ನೂರೆಂಟು ವಿಷಯಗಳಿವೆ ಎಂದು ಹೇಳಿದ್ದೇನೆ. ಈಗ ಇಲ್ಲಿ ಮುಖ್ಯವಾಗಿ ಇರತಕ್ಕಂಥಾದ್ದು ಬೆಲೆ ಏರಿಕೆ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ವಿದ್ಯುತ್ ಪ್ರಸರಣ ನಿಗಮದ ಬೆಲೆ ಏರಿಕೆಯ ಬಗ್ಗೆ ಪರಿಶೀಲಿಸಿ, ಸಲಹೆ ನೀಡಲು ವಿದ್ಯುತ್ ನಿಯಂತ್ರಣ ಪ್ರಾಧಿಕಾರದ ಸಭೆಯು, ವಿದ್ಯುತ್ ಸೋರಿಕೆ, ಕಳ್ಳತನ, ವಿದ್ಯುತ್ ದರ ಜಾಸ್ತಿ..

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಒಂದ್ನಿನಿಮಿಷ ದಯವಿಟ್ಟು ಅವಕಾಶ ಕೊಡಿ. ಸ್ವಾಯುತ್ತ ಸಂಸ್ಥೆಗೆ ಸಂಬಂಧಪಟ್ಟ ಹಾಗೆ ಇಲ್ಲಿ ವಿಚಾರ ರೈಸ್ ಮಾಡುವ ಹಾಗಿಲ್ಲ ಎಂದು ಹೇಲಿದರು. ನಿಜವಾಗಿ ಇಲ್ಲಿ ಇರುವುದೇನೆಂದರೆ.

"Matters relating to the day-to-day administration of an autonomous organisaton, corporation cannot be raised.."

It is not a day-to-day administration.

ನಾವು ಇಲ್ಲಿ ಯಾರದೋ ಟ್ರಾನ್ಸ್‌ಫರ್ ಮಾಡಿಸುವುದಕ್ಕೆ, ಅಥವಾ ಯಾರದೋ ಪೋಸ್ಟಿಂಗ್ಸ್ ಬಗ್ಗೆ ಇಲ್ಲಿ ರೈಸ್ ಮಾಡುತ್ತಿಲ್ಲ.

"A motion must not raise more than one issue." Agreed.

"However, subject regerred to in different adjournment motions raising substantially the same question have been allowed to be discussed together on the first admittted motion."

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನನ್ನ ಮನವಿ ಏನೆಂದರೆ ಈಗ ಚರ್ಚೆ ಬೇಡವೆಂದು ಯಾರೂ ಹೇಳುತ್ತಿಲ್ಲ. ನಾವು ಚರ್ಚೆಗೆ ಸಿದ್ಧರಿದ್ದೇವೆ. ಆದನ್ನು ಅಡ್ಜರ್ನ್‌ಮೆಂಟ್ ಮೋಷನ್ ಫಾರಂನಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು ಬೇಡ. ಚರ್ಚೆಗೆ ಬೇಕಾದರೆ ತಾವು ಕನ್‌ವರ್ಟ್ ಮಾಡಿ. ನಿಮಗೆ ಸಮಗ್ರವಾದಂಥ ರೀತಿಯಲ್ಲಿ ಚರ್ಚೆ ಆಗಬೇಕಲ್ಲವೇ?

we are ready to accept it. What more you want?

(ಗೊಂದಲ)

ಶ್ರೀ ಡಿ.ವಿ.ಸದಾನಂದಗೌಡ : ಮಾನ್ಯ ಅಧ್ಯಕ್ಷರಿಗೆ ಕನ್‌ವಿನ್ಸ್ ಆದರೆ ಮಾತ್ರ ಆಲ್ಲವೇ ನಿಯಮ 69 ರಲ್ಲಿ ಚರ್ಚೆಗೆ ತರಬೇಕಾದದ್ದು.

(ಗೊಂದಲ)

ಅಧ್ಯಕ್ಷರು : ಶ್ರೀ ರಾಮದಾಸ್‌ರವರೇ, ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳಬಹುದೇ ಅಥವಾ ಇಲ್ಲವೇ ಎನ್ನುವುದರ ಬಗ್ಗೆಯೇ ಇಲ್ಲಿ ಈಗ ನಾವು ಮಾತನಾಡುತ್ತಿರುವುದು

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಆ ಕೆ.ಇ.ಬಿ. ಸ್ವಾಯತ್ತ ಸಂಸ್ಥೆಯಾಗಿರುವುದರ ಜೊತೆಗೆ ಸರ್ಕಾರ ಅದನ್ನು ಬಿಟ್ಟಿದೆಯೇ ಹೇಗೆ ಎನ್ನುವುದರ ಬಗ್ಗೆಯೂ ಚರ್ಚೆಯಾಗಬೇಕು.

ಅಧ್ಯಕ್ಷರು : ಆಡಳಿತ ಪಕ್ಷದ ಕಡೆಯಿಂದ ಮತ್ತು ವಿರೋಧ ಪಕ್ಷದ ಕಡೆಯಿಂದ ಮಾತನಾಡಿದ ಎಲ್ಲವನ್ನೂ ನಾನು ಕೇಳಿದ್ದೇನೆ. ಎರಡೂ ಕಡೆಯಲ್ಲಿಯೂ ದೊಡ್ಡ ದೊಡ್ಡ ಸಂಸದೀಯಪಟುಗಳಿದ್ದೀರಿ. ಯಾರೇನೂ ಕಡಿಮೆ ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ 'ತಾವು ವಿರೋಧ ಪಕ್ಷದ ಕಡೆಗೆ ಕುಳಿತುಕೊಂಡಿದ್ದಾಗ ಹೀಗೆ ಹೇಳಿದಿರಿ, ಈಗ ಅಲ್ಲಿ ಆ ರೀತಿ ಏಕೆ ಹೇಳುತ್ತೀರಿ' ಎಂದು ಹೇಳಿದರು ಒಂದು ಸಾರಿ ತಪ್ಪು ಮಾಡಿದ್ದನ್ನು ಮತ್ತೆ ಮತ್ತೆ ಮಾಡಬೇಕೆಂದು ಇದೆಯೇ?

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ : ಒಂದು ಸಾರಿ ಅಕಸ್ಮಾತ್ತಾಗಿ ತಪ್ಪಾಗಿಬಿಟ್ಟರೆ ಅದನ್ನೇ ಮಾಡುತ್ತಾ ಹೋಗಬೇಕೆಂದು ಇದೆಯೇ?

ಅಧ್ಯಕ್ಷರು : ಇಲ್ಲ. ತಪ್ಪು ಮಾಡಿದ್ದಾರೆ ಅದನ್ನು ನಾವು ಸರಿಪಡಿಸಿಕೊಳ್ಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಒಂದು ವಿಷಯವನ್ನು ಕ್ರಿಯಾಲೋಪವಾಗಿ ರೈಸ್ ಮಾಡಿದೆ.,'ರಾಜ್ಯಾಂಗ ತತ್ವಕ್ಕೆ ಅನುಗುಣವಾಗಿ ನಾವು ಮಾಡತಕ್ಕಂಥ ಸಂವಿಧಾನಾತ್ಮಕ ಕ್ರಮ ಏನಿದೆ, ನಾವು ರಾಜ್ಯಪಾಲರನ್ನು ಇಲ್ಲಿಗೆ ಆಹ್ವಾನಿಸುತ್ತೇವೆ, ಆಡಳಿತ ವ್ಯವಸ್ಥೆ ಬಗ್ಗೆ ಅವರು ವ್ಯಾಪ್ತಿ ಮಾಡುತ್ತಾರೆ, ಅದಕ್ಕೆ ಚಂದನಾ ನಿರ್ಣಯವನ್ನು ಮಾಡತಕ್ಕಂಥಾದ್ದು ಆದ್ಯ ಕರ್ತವ್ಯ ಎನ್ನುವುದು ಮತ್ತು ಅದಕ್ಕೆ ಅವಕಾಶ ಮಾಡಿಕೊಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿದರು. ಈ ಸಮಯದಲ್ಲಿ ಆಡಳಿತದ ಲೋಪದೋಷಗಳನ್ನು ಸಂಪೂರ್ಣವಾಗಿ ಪ್ರಸ್ತಾಪ ಮಾಡತಕ್ಕಂಥಾದ್ದು ಟೀಕೆ ಮಾಡತಕ್ಕಂಥ ಅವಕಾಶ ಈ ಸಭೆಯ ಎಲ್ಲಾ ಸದಸ್ಯರಿಗೂ ಇದೆ. ಇಂಥ ಅವಕಾಶ ಇರುವಾಗ, ಈ ಮಧ್ಯೆ ಸದನದಲ್ಲಿ ತಂದಿರತಕ್ಕಂಥ ನಿಲುವಳಿ ಸೂಚನೆ ಇದು ಎರಡನೆಯದು. ಇದಕ್ಕೆ ಅವಕಾಶ ಕೊಟ್ಟರೆ, It would not be a good precedent. It would be a very bad precedent. ಎಂದು

ನಾನು ಹೇಳಿದೆ. ನಾನೇನೂ ಅಂಥ ದೊಡ್ಡ ಸಂಸದೀಯ ಪಟು ಆಲ್ಲ. ಆದರೆ ತಪ್ಪು ಮಾಡುವುದು ಸರಿಯಲ್ಲ ಎಂದು ನಾನು ಹೇಳುತ್ತಿದ್ದೇ. ಈಗ ಬ್ಯುಸಿನೆಸ್ ಅಡ್ವೈಸರಿ ಕಮಿಟಿ ಇದೆ. ಹಾಗಾದರೆ ಆ ಬ್ಯುಸಿನೆಸ್ ಅಡ್ವೈಸರಿ ಕಮಿಟಿ ಏಕೆ ಬೇಕು? ಅಲ್ಲಿ ನಾವು ಬರುವುದು ತಾವು ಕೊಡುವ ತಿಂಡಿ ತಿನ್ನುವುದಕ್ಕಾಗಿ ಮಾತ್ರವೇ? ಅದಕ್ಕೆ ಒಂದು ಘನತೆ ಇಲ್ಲವೇ? ಅದಕ್ಕೆ ಒಂದು ಘನತೆಗೌರವ ಇದ್ದರೆ ಅದರ ಪ್ರಕಾರ ನಾವು ನಡೆದುಕೊಳ್ಳುವುದು ಬೇಡವೇ? I here are so many issues. ಯಾವುದೋ ಒಂದು ವಿಷಯವನ್ನು ಕೊಟ್ಟುಬಿಟ್ಟು ಡಿಸ್‌ಕಸ್ ಮಾಡುತ್ತೇವೆಂದು ಹೇಳುವುದಾದರೆ ಡಿಸ್‌ಕಸ್ ಮಾಡಿ. ಯಾರು ಬೇಡ ಎಂದು ಹೇಳುತ್ತಾರೆ. ಆದರೆ ಬೇರೆ ರೂಪದಲ್ಲಿ ಮಾಡಕೂಡದು.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಬಿಎಸಿ ಮೀಟಿಂಗ್‌ನಲ್ಲಿ ಶ್ರೀ ಚಂದ್ರೇಗೌಡರು ಇದನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಎಂದು ಒಪ್ಪಿಕೊಂಡೇ ಬಂದರು. ಈಗ ಇಲ್ಲಿ ಚರ್ಚೆಗೆ ಅವಕಾಶವಿಲ್ಲ ಎಂದು ಹೇಳುತ್ತಾರೆ.

(ಗೊಂದಲ)

ಶ್ರೀ ಎ. ರಾಮದಾಸ್: ಚರ್ಚೆ ಪ್ರಾರಂಭವಾಗಿದೆ ಸರ್. ನಮ್ಮ ನಾಯಕರು ಪ್ರಾರಂಭ ಮಾಡಿದ್ದಾರೆ. ಪುನಃ ಏಕೆ ಅದರ ಬಗ್ಗೆ ಚರ್ಚೆ?

(ಗೊಂದಲ)

ಶ್ರೀ ಟಿ.ಬಿ. ಚಂದ್ರೇಗೌಡ: ಶ್ರೀ ಬಚ್ಚೇಗೌಡರೆ, ತಮಗೆ ಗೊತ್ತಿಲ್ಲದ ವಿಚಾರವನ್ನು ದಯವಿಟ್ಟು ತಾವು ಮಾತನಾಡಬೇಡಿ. ಈಗಲೂ ನಾವು ಚರ್ಚೆಗೆ ಸಿದ್ಧರಾಗಿದ್ದೇವೆ. ಆದರೆ ಈ ನಿಲುವಳಿ ಸೂಚನೆ ಕೆಳಗಡೆ ಅಲ್ಲ. ಈ ನಿಯಮದ ಕೆಳಗೆ ಅಲ್ಲ.

(ಗೊಂದಲ)

ಅಧ್ಯಕ್ಷರು: ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಹೀಗೆ ಎರಡೂ ಕಡೆಯಿಂದ ಕೇಳಿದ್ದೇನೆ. ಇಲ್ಲಿ ಕಾನ್‌ಸ್ಟ್ರಿಬ್ಯೂಷನ್ ಅಬ್ಲಿಗೇಷನ್‌ಗೆ ಸಂಬಂಧಪಟ್ಟದ್ದು ಮತ್ತು ಇನ್ನೊಂದು ನಿಲುವಳಿ ಸೂಚನೆ ಹೀಗೆ ಎರಡು ವಿಷಯ ನಮ್ಮ ಮುಂದಿದೆ. ಈಗ ನಿಲುವಳಿ ಸೂಚನೆ ಮೂಲಕ ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎನ್ನುವ ಪ್ರಶ್ನೆ ಇದೆ. ಇದನ್ನು ಬೇರೆ ನಿಯಮದಡಿ ಚರ್ಚೆಗೆ ತೆಗೆದುಕೊಳ್ಳುವ ಹಾಗೆ ಕನ್‌ವರ್ಟ್ ಮಾಡಿ ಎಂದು ಆಡಳಿತಪಕ್ಷದ ಸದಸ್ಯರು ಮತ್ತು ನಾಯಕರು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ವಿರೋಧ ಪಕ್ಷದವರು ನಿಲುವಳಿ ಸೂಚನೆ ಮೂಲಕ ಏನು ವಿಷಯ ತಂದಿದ್ದಾರೆ ಅದನ್ನು ನಿಯಮ 69 ರ ಕೆಳಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಎರಡನೆಯದಾಗಿ ಕಾನ್‌ಸ್ಟಿಟ್ಯೂಷನಲ್ ಅಬ್ಲಿಗೇಷನ್ಸ್ ಏನು ಇದೆ ಅದನು ನಾವು ಫುಲ್‌ಪೀಲ್ ಮಾಡಬೇಕಾಗುತ್ತದೆ. ಮೊದಲು ಶ್ರೀ ವೈ.ಕೆ. ರಾಮಯ್ಯನವರು ಮಾನ್ಯ ರಾಜ್ಯಪಾಲರಿಗೆ ವಂದನೆ ಸಲ್ಲಿಸುವ ಬಗ್ಗೆ ಮಾತನಾಡಲಿ. ಅವರು ಮಾತನಾಡಿ ಮುಗಿದ ಮೇಲೆ ಬೇಕಾದರೆ ನಿಯಮ 69 ರ ಕೆಳಗಡೆ ಚರ್ಚೆ ಪ್ರಾರಂಭ ಮಾಡಿ. ಶ್ರೀ ವೈ.ಕೆ. ರಾಮಯ್ಯನವರು ಮತನಾಡಿ ಆದಮೇಲೆ ಇದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ 27 ನೇ ಪುಟದಲ್ಲಿ 29 ನೇ ಪ್ಯಾರಾದಲ್ಲಿ ಇದೆ. ಆಗ ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು: ನಿಲುವಳಿ ಸೂಚನೆಗಿಂತ ಬಹಳ ಮುಖ್ಯವಾದದ್ದು ಕಾನ್ಸ್‌ಟ್ಯೂಷನಲ್ ಅಬ್ಲಿಗೇಷನ್ಸ್. ಆದ್ದರಿಂದ ಇದಕ್ಕೆ ಮೊದಲು ಅವಕಾಶ.

ಶ್ರೀ ಜಗದೀಶ್ ಶೆಟ್ಟರ್: ಎರಡಕ್ಕೂ ಮಹತ್ವವಿದೆ. ಆದ್ದರಿಂದ ನಾವು ತಂದಿರುವ ವಿಷಯವನ್ನು ಪ್ರಸ್ತಾಪ ಮಾಡಿಬಿಡುತ್ತೇವೆ.

ಅಧ್ಯಕ್ಷರು: ಮೊದಲು ಶ್ರೀ ವೈ.ಕೆ. ರಾಮಯ್ಯನವರು ಮಾತನಾಡುತ್ತಾರೆ. ನಂತರ ನೀವು ನಿಯಮ 69ರ ಕೆಳಗಡೆ ಚರ್ಚೆ ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ತಮ್ಮ ತೀರ್ಮಾನವನ್ನು ಮನಸ್ಸು ಬದಲು ಮಾಡಿ ಪುನರ್‌ಪರಿಶೀಲನೆ ಮಾಡಬೇಕೆಂದು ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. This becomes a bad precedent. ತಾವು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಿ. ಅದು ಆದಮೇಲೆ ತಾವು ಏನು ಬೇಕಾದರೂ ಹೇಳಿ ನಾವು ಒಪ್ಪಿಕೊಳ್ಳುತ್ತೇವೆ. ಏಕೆಂದರೆ ರೂಲ್ಸ್ ಬುಕ್‌ನಲ್ಲಿ ನಿಲುವಳಿ ಸೂಚನೆಗೆ ಅವಕಾಶವಿದೆ. ಈ ಚರ್ಚೆ ಆಡಳಿತ ಪಕ್ಷದವರಿಗಂತೂ ಇವತ್ತು ಬೇಕಾಗಿಲ್ಲ. ಅವರಿಗೆ ಏಕೆ ಈ ಚರ್ಚೆ ಬೇಕಾಗಿಲ್ಲ ಎನ್ನುವುದು ನಮಗೆ ಗೊತ್ತಿದೆ, ಅರ್ಥವಾಗುತ್ತಿದೆ. ಅದರಿಂದಾಗಿ ತಾವು ಏನೂ ಸಹಿತ ಕೇಳದೆ ಈ ರೀತಿ ನಿರ್ಧಾರ ತೆಗೆದುಕೊಂಡರೆ ಹೇಗೆ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ: ದಯವಿಟ್ಟು ತಾವು ಇದನ್ನು ಪುನರ್‌ವಿಮರ್ಶೆ ಮಾಡಿ. ಇದು ಸರಿಯಾದ ಕ್ರಮ ಅಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ: ಮಾನ್ಯ ಅಧ್ಯಕ್ಷರ ತೀರ್ಪಿಗೆ ನಮ್ಮ ಒಪ್ಪಿಗೆ ಇದೆ. ಇಲ್ಲವೆಂದು ನಾವು ಹೇಳುವುದಿಲ್ಲ. ಆದರೆ ರೂಲ್ಸ್ 69 ರ ಕೆಳಗಡೆ ಪ್ರಾರಂಭಿಕವಾಗಿ ನಮ್ಮ ನಾಯಕರು ಮತ್ತು ಮಾನ್ಯ ಸಿಂಧ್ಯಾರವರು ಪ್ರಸ್ತಾಪ ಮಾಡಲಿ. ಅದರ ನಂತರ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಲಿ. ಈಗ ಪ್ರಾರಂಭಿಕ ಹಂತವಾಗಿ ಈ ವಿಷಯವನ್ನು ಸಬ್‌ಮಿಟ್ ಮಾಡಲಿ. ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : Even the No-confidence Motion, he can sit in his chamberes and decide. ಇದು ಸರಿಯಾದ ಪ್ರಿಸಿಡೆಂಟ್ ಅಲ್ಲವೆಂದು ಮಾನ್ಯ ಹಿರಿಯ ಸದಸ್ಯರು ಹೇಳಿದರೆ ನಾನೇನು ಮಾಡಲಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಇವರಿಂದ ನಾವು ಸತ್‌ಸಂಪ್ರದಾಯಗಳನ್ನು ಕಲಿಯಬೇಕೆ?

ಶ್ರೀ ಡಿ.ಬಿ.ಚಂದ್ರೇಗೌಡ: ಸ್ವಾಮಿ ಸಿಂಧ್ಯಾರವರೆ, ಕಲಿಯುವುದು ಬೇಕಾದಷ್ಟು ಇದೆ.

ಅಧ್ಯಕ್ಷರು: ಎಲ್ಲರೂ ಬುದ್ಧಿವಂತರಿದ್ದಾರೆ, ಯಾರಿಂದ ಯಾರು ಕಲಿಯಬೇಕಾಗಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಆಂಧ್ರಪ್ರದೇಶದಲ್ಲಿ ಏನಾಗಿದೆ, ಕೆ.ಇ.ಬಿ.ರೇಟ್ ಜಾಸ್ತಿ ಮಾಡಿದಾಗ ಏನಾಗಿದೆ ಎಂಬುದನ್ನು ಇವರೆಲ್ಲರೂ ಮರೆತು ಬಿಡುತ್ತಾರೆ. ಇವರಿಗೆ ಎಲ್ಲದಕ್ಕೂ consensus ಬೇಕು, ಒಂದು ಚರ್ಚೆಗೆ ಅವಕಾಶ ಮಾಡಿ ಕೊಡುವುದಕ್ಕೆ ಇವರು ತಯಾರು ಇಲ್ಲವೆಂದರೆ ನಾವು ಹೇಗೆ ಮಾತನಾಡುವುದು? ಪ್ರಿಲಿಮಿನರಿ ಸಬ್ ಮಿಷನ್‌ಗೆ ಇವರು ಅವಕಾಶ ಮಾಡಿಕೊಡಲಿಲ್ಲವೆಂದರೆ ಹೇಗೆ? ಮಾನ್ಯ ಸಭಾಧ್ಯಕ್ಷರೆ, ತಾವು ಈಗ ನೀಡಿದ ತೀರ್ಮಾನವನ್ನು ದಯಮಾಡಿ ಪುನರ್ ವಿಮರ್ಶೆ ಮಾಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಒಟ್ಟಿಗೆ 7-8 ಜನ ಸದಸ್ಯರು ನಿಂತು ಮಾತನಾಡಿದರೆ ಅದನ್ನು ಬರೆದುಕೊಳ್ಳಬೇಡಿ.

(ಗೊಂದಲ)

I don't accept your words. Please excuse me. I must allow them. They have got every right to tell.

(ಗೊಂದಲ)

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ, ಅವರು ಹೇಳಿದ್ದನ್ನು ಮಾತ್ರ ಬರೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: I have given the ruling. There is no question of revising. ಬೇರೆಯವರು ಮಾತನಾಡಿದ್ದನ್ನು ಬರೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ವಿಧಾನ ಸಭೆಗೆ ಒಂದು ಐತಿಹಾಸಿಕ ಪರಂಪರೆ ಇದೆ, ಇದನ್ನು ನಾವೆಲ್ಲರೂ ಉಳಿಸಿಕೊಂಡು ಬಂದಿದ್ದೇವೆ. ನಾವು ಇಲ್ಲಿ ಯಾವುದೇ ತೀರ್ಮಾನ ತೆಗೆದುಕೊಂಡರೂ ಅದು ಒಳ್ಳೆಯ ಸಂಪ್ರದಾಯದಿಂದ ಕೂಡಿದ ತೀರ್ಮಾನವಾಗಿರಬೇಕೇ ವಿನಃ ಕೆಟ್ಟ ಸಂಪ್ರದಾಯವನ್ನು ನಾವು ಸೃಷ್ಟಿಸಬಾರದು. ಇದಕ್ಕೆ ನಾವೆಲ್ಲರೂ ಬದ್ಧರಾಗಿರಬೇಕು. ಈ ವಿಚಾರದಲ್ಲಿ ಮಾನ್ಯ ಸಭಾಧ್ಯಕ್ಷರು, ಎಲ್ಲಾ ವಿಚಾರಗಳನ್ನು ರಾಜ್ಯಪಾಲರ ಭಾಷಣದಲ್ಲಿ ಚರ್ಚೆ ಮಾಡಬಹುದು. ಆದ್ದರಿಂದ ಆದರಲ್ಲಿ ಚರ್ಚೆ ಮಾಡಿ ಎಂದು ಹೇಳಿದರು. ವಿರೋಧ ಪಕ್ಷಗಳಿಗೆ ಯಾವುದೇ ಸಂದರ್ಭದಲ್ಲಿ ರೂಲ್ 69 ರಲ್ಲಿ ಸಾರ್ವಜನಿಕ ಮಹತ್ವದ ವಿಷಯಗಳನ್ನು ನಿಲುವಳಿ ಸೂಚನೆಯ ಮೂಲಕ ತಮ್ಮ ಗಮನಕ್ಕೆ ತರುವ ಅವಕಾಶವಿದೆ. ತಮ್ಮ ಕೊಠಡಿಯಲ್ಲಿ, ನಾನು ಮಾನ್ಯ ಸಿಂಧ್ಯಾರವರು ಹಾಗೂ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಚಂದ್ರೇಗೌಡರವರು ಇದ್ದಾಗ,

ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಆರಂಭವಾಗಬೇಕು. ಇದನ್ನು ತಾವು ಆಶ್ವಾಸನೆ ಕೊಡುವುದಾದರೆ, ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಮಾನ್ಯ ಕಾನೂನು ಸಚಿವರು ಹೇಳಿದಾಗ, ನಾವು ಅವರಿಗೆ, ಬೆಳಿಗ್ಗೆ ಒಂದು ಗಂಟೆ ಸಮಯದಲ್ಲಿ ಈ ವಿಚಾರದ ಬಗ್ಗೆ ಚರ್ಚಿಸಿ ಮಧ್ಯಾಹ್ನ ಖಂಡಿತವಾಗಿ ರಾಜ್ಯಪಾಲರ ಭಾಷಣಕ್ಕೆ ಸಂಪೂರ್ಣವಾಗಿ ಚರ್ಚೆಗೆ ಅವಕಾಶ ಕೊಡುತ್ತೇವೆ ಎನ್ನುವ ಆಶ್ವಾಸನೆ ನೀಡಿದೆವು. ನಂತರ ತಾವು ಇಲ್ಲಿ ಬಂದು ಅವಕಾಶ ಕೊಟ್ಟಿರಿ. ಇಲ್ಲಿ ಚರ್ಚೆ ಮಾಡಿದ ಮೇಲೆ ಇದನ್ನು 69 ಗೆ ಕನ್‌ವರ್ಟ್ ಮಾಡಬೇಕೆ ಅಥವಾ ತಿರಸ್ಕಾರ ಮಾಡಬೇಕೆ ಎನ್ನುವ ಅಧಿಕಾರ ತಮಗೆ ಇದೆ ಅದರ ಪ್ರಕಾರ ಮಾಡಿ.. ಆದರೆ ಚರ್ಚೆಗೆ ಪೂರ್ವಭಾವಿಯಾಗಿ ತಮ್ಮನ್ನು ಮನ ಮನ ಒಲಿಸುವ ಹಂತದಲ್ಲಿರುವಾಗ, ಚರ್ಚೆಯನ್ನು ಅರ್ಧದಲ್ಲಿಯೇ ನಿಲ್ಲಿಸಿ ಇದನ್ನು 69 ಗೆ ಕನ್‌ವರ್ಟ್ ಮಾಡಿರತಕ್ಕಂಥಾದ್ದ ಕೆಟ್ಟ ಸಂಪ್ರದಾಯ. ಇಲ್ಲಿ ಅನೇಕ ಹಿರಿಯ ಸದಸ್ಯರು ಇದ್ದೀರಿ, ನಮ್ಮ ವಾದವನ್ನು ತಾವು ಮೊದಲು ಕೇಳಬೇಕು. ಏಕೆಂದರೆ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಸುಮಾರು 29 ಇಲಾಖೆಗಳ ಮೇಲೆ ಚರ್ಚೆ ಮಾಡುವಂಥ ಅವಕಾಶವಿದೆ. ಆದರೆ, ರೂಲ್ 69 ರಲ್ಲಿ ನಾವು ಇದನ್ನು ಎಂಫಸಿಸ್ ಮಾಡುವಂಥ ಅವಕಾಶವಿದೆ. ಆದ್ದರಿಂದ, ಇವತ್ತು ಬಹಳ ಮಹತ್ವದ ವಿಚಾರವಾಗಿರುವುದರಿಂದ ಹಾಗೂ ಸುಮಾರು ಒಂದು ಕೋಟಿ ಗ್ರಾಹಕರಿಗೆ ವಿದ್ಯುತ್ ಕೊರತೆಯಾಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡಬೇಕು.

ಅಧ್ಯಕ್ಷರು : ಡೀಟೆಲ್ಸ್‌ಗೆ ಹೋಗಬೇಡಿ. I have given my ruling.

(ಗೊಂದಲ)

ಶ್ರೀ ಬಿ.ಸೋಮಶೇಖರ್ : ಇದೊಂದು ಮಹತ್ತರವಾದ ವಿಚಾರವಾಗಿರುವುದರಿಂದ ತಮ್ಮ ಇಚ್ಛೆಯಿಂದ ಇಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ನಾವು ತಮಗೆ ವಂದನೆಗಳನ್ನು ಅರ್ಪಿಸುತ್ತೇವೆ. ಅಂದರೆ ತಾವು ನಮಗೆ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದರ ಜೊತೆಗೆ ಇದನ್ನು 69 ಗೆ ಕನ್‌ವರ್ಟ್ ಮಾಡಿದಿರಿ. ಆದ್ದರಿಂದ, ತಾವು ಏನು ರೂಲಿಂಗ್ ಕೊಟ್ಟಿದ್ದೀರಿ ಅದನ್ನು ಪುನರ್ ಪರಿಶೀಲಿಸಬೇಕೆಂದು ನಾವು ಮತ್ತೊಮ್ಮೆ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ. ನಮ್ಮ ವಿಚಾರ ಏನೆಂದರೆ, ಅರ್ಧದಲ್ಲಿಯೇ ನಿಂತಿರುವ ನಮ್ಮ ವಾದವನ್ನು ಸಂಪೂರ್ಣವಾಗಿ ತಾವು ಮೊದಲು ಕೇಳಿದನಂತರ ತಮ್ಮ ಮನಸ್ಸಿಗೆ ಇದು ನಿಲುವಳಿಸೂಚನೆಯ ಮೂಲಕ ಪ್ರಸ್ತಾಪಿಸಬಹುದು. ಇದಕ್ಕೆ ಅರ್ಹತೆ ಇದೆ ಎಂದು ಅನ್ನಿಸಿದರೆ ಆಗ ಅವಕಾಶ ಕೊಡಿ. ಅಂಥ ಸಂದರ್ಭದಲ್ಲಿ ಕನ್‌ವರ್ಟ್ ಮಾಡುವುದುಕ್ಕೆ ಅವಕಾಶವಿದೆಯೇ ವಿನಃ ಮಧ್ಯದಲ್ಲಿಯೇ ಕನ್‌ವರ್ಟ್ ಮಾಡುವಂಥಾದ್ದು ಕೆಟ್ಟ ಸಂಪ್ರದಾಯ, ಆದ್ದರಿಂದ, ತಾವು ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ರಾಮದಾಸ್: ಪಾರ್ಲಿಮೆಂಟಿನಲ್ಲಿ ಕಳೆದ ಅಧಿವೇಸನದಲ್ಲಿ ಕಾಂಗ್ರೆಸ್‌ನವರು ರೂಲ್ ಪ್ರಕಾರ ಪುನರ್ ಪರಿಶೀಲಿಸಬೇಕೆಂದು ಮನವಿ ಮಾಡಿಕೊಂಡಾಗ ಅಲ್ಲಿನ ಸ್ಪೀಕರ್‌ರವರು ಒಪ್ಪಿದ್ದರು. ಅದನ್ನು ಇಲ್ಲಿ ಕೂಡ ಮಾಡಬಹುದು, ಅಲ್ಲೊಂದು ಇಲ್ಲೊಂದು ಮಾಡುವುದು ಬೇಡ. ನಿಮ್ಮಲ್ಲಿ ಮನವಿ ಮಾಡುತ್ತೇವೆ ದಯಮಾಡಿ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರು ಏನು ಪಾಯಿಂಟ್ ರೈಸ್ ಮಾಡಿದರು. ಅದಕ್ಕೆ ಕನ್‌ಸೆಂಟ್ ಅಥವಾ ರಿಜೆಕ್ಷನ್‌ಎನ್ನುವುದನ್ನು ನನ್ನ ಆಫೀಸ್‌ನಲ್ಲಿಯೇ ಮಾಡಬಹುದಾಗಿತ್ತು. ಆದರೆ ಸಾಮಾನ್ಯವಾಗಿ ಇಲ್ಲಿ ನಡೆದುಕೊಂಡು ಬಂದಿರುವ ಪ್ರಕಾರ ಇಲ್ಲಿ ರೈಸ್ ಆದ ಮೇಲೆ ನಂತರ ಮಾಡುತ್ತಿದ್ದೆವು. ಇಲ್ಲಿನ ಸ್ಥಿತಿಗತಿಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಅಂದರೆ, constitutional obligation is more important than the adjournment motion.

ಎರಡನೆಯದಾಗಿ ಅವರು ಪ್ರಾರಂಭ ಮಾಡಿ ಅರ್ಧ ಗಂಟೆಯ ನಂತರ ಮಾತನಾಡಿದರೆ ಏನು ? ಅರ್ಧಗಂಟೆಯಲ್ಲಿ ಸಮುದ್ರ ಏನು ಉಕ್ಕುವುದಿಲ್ಲ. I am very sorry. Mr. Sindhia, I cannot revise my ruling.

ಶ್ರೀ ಎ. ರಾಮದಾಸ್ : ಅವರೇ ಅರ್ಧಗಂಟೆ ತಡವಾಗಿ ಪ್ರಾರಂಭಿಸಲಿ.

Mr. SPEKAER : No, I am very sorry, Mr. Sindhia. I cannot revise my ruling.

ಅವರು ಮುಗಿಸಿದ ಮೇಲೆ ನೀವು ಚರ್ಚೆ ಪ್ರಾರಂಭಿಸಿ.

12.20 ಪಿ.ಎಂ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಅವರು ಪಾರ್ಲಿಮೆಂಟ್‌ನಲ್ಲಿ ಸ್ಟಾಲ್ ಮಾಡಿದ ಹಾಗೆ ನಾವು ಸ್ಟಾಲ್ ಮಾಡುವುದಿಲ್ಲ, ಮನವಿಯನ್ನು ಮಾಡಿಕೊಳ್ಳುತ್ತೇವೆ. ದಯವಿಟ್ಟು ನಮಗೆ ಅವಕಾಶ ಮಾಡಿಕೊಡಿ.

Mr. SPEAKER : That is ruling. I cannot revise my ruling. ಒಂದು ಗಂಟೆಯಲ್ಲಿ ಇಲ್ಲಿ ಏನು ಆಗುವುದಿಲ್ಲ, ಅವರು ಮಾತನಾಡಿದ ಮೇಲೆ ಇದೇ ಪುಟ 27 ಮತ್ತು 28 ರಲ್ಲಿ ರಾಜ್ಯಪಾಲರ ಭಾಷಣದಲ್ಲಿರುವುದನ್ನು ಕುರಿತು ಮಾತನಾಡಿ. It has been convereted under Rule 69. I have given my ruling.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸನ್ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇವೆ.

(INTERRUPTIONS)

ಶ್ರೀ ಎ. ರಾಮದಾಸ್ : ಮಾನ್ಯ ವಿರೋಧಪಕ್ಷದ ನಾಯಕರು ಮೊದಲೇ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದರು; ಅದನ್ನು ನಿಲ್ಲಿಸಿದರೆ ವಿರೋಧಪಕ್ಷದ ನಾಯಕರಿಗೆ ಮತ್ತು ವಿರೋಧಪಕ್ಷಕ್ಕೆ ಅವಮಾನ ಮಾಡಿದಂತಾಗುತ್ತದೆ.

ಅಧ್ಯಕ್ಷರು : ಅಂತಹದ್ದು ಏನೂ ಇಲ್ಲ, Iam very sorry. Don't unnecessarily create other confusions.

(ಮುಂದಲ)

ಶ್ರೀ ಯು. ಆರ್. ಸಭಾಪತಿ: ಸನ್ಮಾನ್ಯ ಅಧ್ಯಕ್ಷರೆ, ತಾವು ಒಂದು ಸಲ ರೂಲಿಂಗ್‌ನ್ನು ಕೊಟ್ಟ ಮೇಲೆ ವಿರೋಧಪಕ್ಷದ ನಾಯಕರೆಲ್ಲಾ ಈ ರೀತಿಯಾಗಿ ಮಾತನಾಡುತ್ತಿರುವುದನ್ನು ನೋಡಿದರೆ, ಇವರಿಗೆ ಸದನದ ಮೇಲೆ ಗೌರವವಿಲ್ಲವೆಂದು ನಾನು ಹೇಳಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಮೇಲೆ ಗೌರವವಿಲ್ಲವೆಂದು ನಾನು ಹೇಳಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಮೇಲೆ ಗೌರವವಿಲ್ಲವೆಂದು ಹೇಳಬಯಸುತ್ತೇನೆ, ಈ ರಾಜ್ಯದ ಜನತೆಯ ಬಗ್ಗೆ ಯಾವುದೇ ಕಳಕಳಿ ಇಲ್ಲ, ಸದನದ ಕಾರ್ಯಕಲಾಪಕ್ಕೆ ಅಡಚಣೆಯನ್ನುಂಟು ಮಾಡಲು ಪ್ರಯತ್ನಪಡುತ್ತಿರುವ ವಿರೋಧಪಕ್ಷದವರೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ವೈ. ಕೆ. ರಾಮಯ್ಯನವರೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ಪ್ರಸ್ತಾವವನ್ನು ಓದಿ.

4. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ.

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

" 2001 ರ ಫೆಬ್ರವರಿ 26 ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಸ್ತಾವವನ್ನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

(ಗೊಂದಲ)

Mr. SPEAKER : I cannot revise my ruling. ಮೂವ್ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು) : ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೂ ವಿರೋಧಪಕ್ಷದವರು ಒಪ್ಪುವುದಿಲ್ಲವೆಂದರೆ ಹೇಗೆ? ನೀವೇನಾದರೂ ಅವಮಾನ ಮಾಡಿದರೆ ಆ ಮಾತು ಬೇರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕು. ಬೆಳಿಗ್ಗೆ ಏನಾಯಿತು. ಎಂಬುದರ ಬಗ್ಗೆ ತಾವು ಗಮನಹರಿಸಬೇಕು.

Mr. SPEAKER : I have allowed Mr.Ramaiah to speak for half an hour.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರ ರೂಲಿಂಗ್‌ನ್ನು ಮಾನ್ಯ ವಿರೋಧಪಕ್ಷದ ನಾಯಕರೆ ಪ್ರಶ್ನೆ ಮಾಡುತ್ತಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ಎರಡು ರೂಲಿಂಗ್ ಇದ್ದಾವೆ.